ಜನಪದ ವಿಚಾರ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೯ ಸೆಪ್ಟೆಂಬರ್-೨೦೦೮ ಸಂಚಿಕೆ-೨



ಭಾರತದ ಇಂದಿನ ರೀತಿ-ನೀತಿಯನ್ನು
ಪ್ರಶ್ನಿಸುವ ಹಿಂದ್-ಸ್ವರಾಜ್

ಜನಪದ ವಿಚಾರದಲ್ಲಿ

ಸೆಪ್ಟಂಬರ್–೨೦೦೮

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಸೆಪ್ಟಂಬರ್ - ೨೦೦೮
ಸಂಪುಟ - ೯
ಸಂಚಿಕೆ - ೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೬ ೩೧೮೩೪೪
e-mail - janapada@yahoo.com

ಸಮಸ್ಯೆ

ಕಾರ್ಮುಗಿಲುಗಳು
ಧಾರಾಕಾರ ಮಳೆ ಸುರಿಸುತ್ತಿರುವಾಗ
ನನ್ನ ಮಗು ಪ್ರಶ್ನಿಸುತ್ತದೆ,
'ಅಪ್ಪಾಜಿ, ದೇವರೇಕೆ ಅಳುತ್ತಿದ್ದಾನೆ?'
ನಾನೇನು ಉತ್ತರಿಸಲಿ?

ಹುಲ್ಲನ್ನಲಂಕರಿಸಿರುವ
ಮುತ್ತಿನಂತಿರುವ ಹಿಮಬಿಂದುಗಳನ್ನು
ನೋಡುತ್ತಾ
ನನ್ನ ಮಗು ಗೆಲ್ಯದಿಂದ ಬೇಡುತ್ತದೆ,
'ಅಪ್ಪಾಜಿ, ಲವನ್ನೆಲ್ಲ ಕೂಡಿಸಿ ನನಗೊಂದು
ನೆಕ್‌ಲೆಸ್ ಮಾಡಿಸಿಕೊಡು!'
ನಾನೇನು ಮಾಡಲಿ?

ಪಡುವಣವನ್ನು ರಕ್ತಕೆಂಪಾಗಿಸುತ್ತಿರುವ
ಸೂರ್ಯಾಸ್ತವನ್ನೇ ಗಮನಿಸುತ್ತಾ
ನನ್ನ ಮಗು ಪ್ರಶ್ನಿಸುತ್ತದೆ,
'ಅಪ್ಪಾಜಿ, ಸೂರ್ಯನನ್ನು ಯಾರು ಕೊಂದವರು?'
ನಾನೇನು ಉತ್ತರಿಸಲಿ?

ಹೂ ಹಣ್ಣು ಮುಂತಾದ
ಎಲ್ಲವನ್ನೂ ದೇವರೇ ಮಾಡಿದನೆಂದು ನೀನು
ಹೇಳ್ತೀಯ,
'ಹಾಗಾದರೆ ಅಪ್ಪಾಜಿ, ನನಗೆ ದೇವರನ್ನು ತೋರ್ಸು'
ನನ್ನ ಮಗು ಕಾಡುತ್ತದೆ
ನಾನೇನು ಮಾಡಲಿ?

– ಡಾ.ಜಿ. ಸೌಂದರರಾಜ್
(ಮೂಲ : ತಮಿಳು; ಅನು : ಡಾ.ಆರ್.ರಾಮಕೃಷ್ಣ)

ವಿಚಾರ ದೀಪ್ತಿ

ಜಗತ್ತಿನ ಎಲ್ಲ ಕಡೆ ಶಿಕ್ಷಣದ ಇಲಾಖೆ ಸರ್ಕಾರದ ಕೈಯಲ್ಲಿದೆ. ಇದಕ್ಕಿಂತ ಹೆಚ್ಚಿನ ಆಪತ್ತು ಇನ್ನೊಂದಿಲ್ಲವೆಂದು ನಾನು ತಿಳಿದಿದ್ದೇನೆ. ಶಿಕ್ಷಣದ ಅಧಿಕಾರ ಸರ್ಕಾರದ ಕೈಯಲ್ಲಿರಬಾರದೆಂದು ನಾನು ಸಾರಿಸಾರಿ ಹೇಳಿದ್ದೇನೆ. ಜ್ಞಾನಿಗಳ ಕೈಯಲ್ಲಿರಬೇಕು. ಈ ಕೆಲಸ ಸೇವಾಪರಾಯಣತೆಯಿಂದಲೇ ಆದೀತು. ಈಗಂತೂ ಸರ್ಕಾರಗಳು ಶಿಕ್ಷಣವನ್ನು ವಶಪಡಿಸಿಕೊಂಡಿವೆ. ಶಿಕ್ಷಣ ಶಾಖೆಯ ಅಧಿಕಾರಿಗಳು ಯಾವ ಪುಸ್ತಕವನ್ನು ನೇಮಿಸಿದರೆ ಅದನ್ನು ವಿದ್ಯಾರ್ಥಿಗಳೆಲ್ಲರೂ ಓದಬೇಕು. ಉತ್ತರ ಪ್ರದೇಶದ ೫೧ ಜಿಲ್ಲೆಗಳ ಆರು ಕೋಟಿ ಜನರಿಗೆ ಒಂದೇ ಪುಸ್ತಕ. ಎಲ್ಲರೂ ಅದನ್ನೇ ಅಧ್ಯಯನ ಮಾಡಬೇಕು. ಈಗ ವಿಶಾಲಾಂಧ್ರ ಆಯಿತು. ಯಂತ್ರೀಕರಣವೂ ವಿಶಾಲವಾದೀತು. ಮೊದಲು ಹನ್ನೊಂದು ಜಿಲ್ಲೆಗಳಿಗೆ ಇಟ್ಟಿದ್ದ ಪಠ್ಯಪುಸ್ತಕ ಈಗ ಇಪ್ಪತ್ತು ಜಿಲ್ಲೆಗಳಿಗೂ. ಸರ್ಕಾರ ಫ್ಯಾಸಿಸ್ಟ್ ಆದರೆ ಎಲ್ಲ ವಿದ್ಯಾರ್ಥಿಗಳಿಗೂ ಫ್ಯಾಸಿಸಂ ಕಲಿಸಿಯಾರು, ಸರ್ಕಾರ ಕಮ್ಯೂನಿಸ್ಟ್ ಆದರೆ ಕಮ್ಯೂನಿಸಂ ಪ್ರಚಾರವಾದೀತು, ಸರ್ಕಾರ ಬಂಡವಾಳವಾದಿಯಾದರೆ ಬಂಡವಾಳಗಾರಿಕೆಯ ಗುಣಗಾನ ಮಾಡೀತು, ಸರ್ಕಾರ ಪ್ಲಾನಿಂಗ್-ವಾದಿಯಾದರೆ ವಿದ್ಯಾರ್ಥಿಗಳಿಗೆ ಪ್ಲಾನಿಂಗಿನ ಕತೆ ಕಲಿಸಿಯಾರು. ಇದಕ್ಕಿಂತ ಹೆಚ್ಚಿನ ಗಂಡಾಂತರ ಮತ್ತೊಂದು ಇಲ್ಲವೇ ಇಲ್ಲ. ಆದುದರಿಂದ ಶಿಕ್ಷಣ ವಿಭಾಗ ಸ್ವತಂತ್ರವಾಗಬೇಕು. ಮೊದಲು ಸ್ವಾತಂತ್ರ್ಯ ತೀರಾ ಅಗತ್ಯ. ನಿಮ್ಮನ್ನು ಯಂತ್ರದೊಳಕ್ಕೆ ಹಾಕಲು ಪ್ರಯತ್ನ ನಡೆಯುತ್ತಿದೆ ಎಂದು ವಿದ್ಯಾರ್ಥಿಗಳನ್ನು ಎಚ್ಚರಿಸುತ್ತೇನೆ. ನಿಮ್ಮ ವಿಚಾರ ಸ್ವಾತಂತ್ರ್ಯ ಚಿಂತನಾ ಸ್ವಾತಂತ್ರ್ಯಗಳನ್ನು ಸ್ವತಂತ್ರವಾಗಿಟ್ಟುಕೊಳ್ಳಿ, ವಿದ್ಯಾರ್ಥಿಗಳಿಗಿದು ಗೊತ್ತಾಗಿಲ್ಲ. ಈಗ ಅವರು ಬೇರೆ ಬೇರೆ ಯೂನಿಯನ್ ಕಟ್ಟುತ್ತಾರೆ. ನನಗೆ ಆಶ್ಚರ್ಯವಾಗುತ್ತದೆ. ಕುರಿಗಳಿಗೆ ಯೂನಿಯನ್, ಹುಲಿಗಳಿಗಲ್ಲ. ವಿದ್ಯಾರ್ಥಿಗಳು ಕುರಿಗಳಾಗಬಾರದು, ಹುಲಿಗಳಾಗಬೇಕು. ವಿಚಾರ ರುಚಿಸಿದರೆ ಅದನ್ನು ಪ್ರಾಚಾರಮಾಡಬೇಕು, ಇಲ್ಲದಿದ್ದರೆ ಅದನ್ನು ಒಪ್ಪಲೇಬಾರದು. ಸರ್ಕಾರದ ದೆಸೆಯಿಂದ ಅವರ ಬುದ್ಧಿ ಸಪ್ಪೆಯಾಗಿದೆ. ತಮ್ಮ ಯೂನಿಯನ್ ಕಟ್ಟುತ್ತಿದ್ದಾರೆ. ನನಗಂತೂ ಅಚ್ಚರಿ. ನಮ್ಮ ದೇಶದಲ್ಲಿ ಲಕ್ಷಾಂತರ ಶಾಲೆ ನಡೆಯಬೇಕು. ಆದರೆ ಒಬ್ಬ ವಿದ್ಯಾರ್ಥಿಯೂ ಒಂದು ಯೂನಿಯನ್ನಿಗೂ ಸೇರಬಾರದು. ನಾಗರೀಕನಾದ ಮೇಲೆ ಸ್ವಾತಂತ್ರ್ಯವನ್ನು ಕಡಿಮೆ ಮಾಡಿಕೊಳ್ಳುವ ಪ್ರಸಂಗ ಬಂದೀತು. ಆಗ ನಾನು ಯೂನಿಯನ್‌ಗೆ ಸೇರಬಹುದು, ಈಗ ನಾನು ವಿದ್ಯಾರ್ಥಿ. ಆದುದರಿಂದ ನೂರಕ್ಕೆ ನೂರು ಸ್ವಾತಂತ್ರ್ಯದ ಹಕ್ಕು ನನಗಿದೆ. ರಾಜಕೀಯವನ್ನು ನಾನು ಚಿಂತನೆ ಮಾಡುತ್ತೇನೆ, ವಿಚಾರ ಮಾಡುತ್ತೇನೆ. ಯಾವ ಅಭಿಪ್ರಾಯವನ್ನೂ ಗಟ್ಟಿ ಮಾಡಿಕೊಳ್ಳುವುದಿಲ್ಲ. ವಿಚಾರವನ್ನು ಬದಲಿಸಬಹುದು. ಯೂನಿಯನ್‌ಗೆ ಸೇರಿದರೆ ನನ್ನ ಈ ಅಧಿಕಾರ ಅಳಿಯುತ್ತದೆ. ಹೀಗೆ ಹೇಳಬೇಕು. ಇದರರ್ಥ ಸಹಕಾರವಿರಬಾರದೆಂದಲ್ಲ. ಸೇವೆಗಾಗಿ ಸಹಕಾರ ಅತ್ಯಗತ್ಯ. ಯೂನಿಯನ್ ಯಂತ್ರದೊಳಗೆ ನೂಕುವಂಥದು. ದೇಶದ ಸ್ವಾಂತಂತ್ರ್ಯಕ್ಕೆ ಅದು ಭಾರಿ ಗಂಡಾಂತರವೇ.

– *ವಿನೋಬಾ* (ನಿತ್ಯನೂತನ ಶಿಕ್ಷಣ)

ಭಾರತದ ಇಂದಿನ ರೀತಿ-ನೀತಿಯನ್ನು ಪ್ರಶ್ನಿಸುವ ಹಿಂದ್-ಸ್ವರಾಜ್

- ಸುರೇಂದ್ರ ಕೌಲಗಿ

ಸ್ವತಂತ್ರ ಭಾರತ ಅನೇಕ ಸಮಸ್ಯೆಗಳ ಮಧ್ಯೆ ಮುಳುಗಿದೆ. ರೈತರ ಆತ್ಮಹತ್ಯ ಅವ್ಯಾಹತವಾಗಿ ನಡೆದಿದೆ. ರೈತರು ತಮ್ಮ ಸಾಲವನ್ನು ತೀರಿಸಲಾರದೆ ಆತ್ಮಹತ್ಯ ಮಾಡಿಕೊಳ್ಳುತ್ತಿದ್ದಾರೆ ಎಂದು ತಿಳಿದು ಕೇಂದ್ರ ಸರ್ಕಾರ ಆ ಸಾಲದ ಅಂದಾಜು ಲೆಕ್ಕ ಹಾಕಿ ಹತ್ತು ಸಾವಿರ ಕೋಟಿ ರುಪಾಯಿ ಸಾಲವನ್ನು ಮನ್ನಾ ಮಾಡಿತು; ಆದರೂ ರೈತರ ಆತ್ಮಹತ್ಯಗಳು ನಿಂತಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಲು ದೇಶದ ಪ್ರತಿಯೊಂದು ಜಿಲ್ಲೆಯಲ್ಲೂ ವಿಶ್ವವಿದ್ಯಾನಿಲಯವನ್ನೂ, ಅಲ್ಲಲ್ಲಿ ತಾಂತ್ರಿಕ ಮಹಾ ವಿದ್ಯಾಲಯಗಳನ್ನೂ, ಇರುವ ಎಲ್ಲ ತಾಂತ್ರಿಕ ಕಾಲೇಜುಗಳನ್ನು ಮೇಲ್ದರ್ಜೆಗೆ ಏರಿಸುವುದನ್ನೂ ಮಾಡಲಾಗುತ್ತಿದೆ. ದೇಶದಲ್ಲಿರುವ ಬಹಳಷ್ಟು ಶಿಕ್ಷಣ ಸಂಸ್ಥೆಗಳನ್ನು ವಿಶ್ವವಿದ್ಯಾನಿಲಯಗಳ ದರ್ಜೆಗೆ ಏರಿಸಲಾಗುತ್ತಿದೆ; ಅನೇಕ ಸಂಸ್ಥೆಗಳಿಗೆ ಕೋಟಿ ರುಪಾಯಿಗಳ ಅನುದಾನವನ್ನು ಕೊಡಲಾಗುತ್ತಿದೆ; ಒಂದೊಂದು ವಿಷಯ ಅಥವಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗುತ್ತಿದೆ. ಈಗ ಕಳೆದ ಒಂದು ದಶಕದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅಗಾಧ ಪ್ರಮಾಣದ ಹಣವನ್ನು ಹೂಡಲಾಗಿದೆ. ದೇಶದ ಪ್ರತಿಯೊಂದು ಸಮಸ್ಯೆಯ ನಿವಾರಣೆಗೆ ಶಿಕ್ಷಣವೇ ರಾಮಬಾಣವೆಂದು ತಿಳಿದು ಶಿಕ್ಷಣ ಕ್ಷೇತ್ರದಲ್ಲಿ ಹಣದ ಹೊಳೆಯನ್ನೇ ಹರಿಸಲಾಗುತ್ತಿದೆ. ಸರಕಾರವಲ್ಲದೆ ಖಾಸಗೀ ಶಿಕ್ಷಣ ಸಂಸ್ಥೆಗಳೂ ಎಗ್ಗಿಲ್ಲದೆ ಹಣವನ್ನು ಖರ್ಚು ಮಾಡುತ್ತಿವೆ. ದೇಶಿಯ ಪ್ರಯತ್ನ ಸಾಲದೆಂದು ವಿದೇಶದ ವಿಶ್ವ ವಿದ್ಯಾನಿಲಯಗಳು, ಪ್ರಖ್ಯಾತ ಸಂಸ್ಥೆಗಳು ದೇಶದಲ್ಲಿ ಹಣ ಹೂಡಿ ಜನರಲ್ಲಿ ಶಿಕ್ಷಣ ಪ್ರಚಾರ ಮಾಡುತ್ತಿವೆ. ಅಲ್ಲದೆ, ಪ್ರತಿಯೊಂದು ಧರ್ಮವು, ಪ್ರತಿಯೊಂದು ಜಾತಿಯು, ಪ್ರತಿಯೊಂದು ಮಠವು ಶಿಶುವಿಹಾರದಿಂದ ಪ್ರಾರಂಭಿಸಿ ತಾಂತ್ರಿಕ-ವೈದ್ಯಕೀಯ ಶಿಕ್ಷಣದ ಮೂಲಕ ಹಾಯ್ದು ಬಂದು ವಿಶ್ವವಿದ್ಯಾನಿಲಯಗಳೆಂದು ಮಾನ್ಯತೆ ಪಡೆಯುವವರೆಗೆ ತಮ್ಮ ತಮ್ಮದೇ ಆದ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿವೆ. ಭಾರತದಲ್ಲಿ ೨೧ನೇ ಶತಮಾನವನ್ನು ಶೈಕ್ಷಣಿಕ ಆಸ್ಫೋಟನೆಯ ಯುಗವೆಂದು ಕರೆಯಬಹುದು. ಆದರೂ ಕೂಡ ಬಹುದುಬಾರಿಯಾಗಿ ಬಡವರು ಪಡೆಯಬಹುದಾದ ಶಿಕ್ಷಣ, ಶ್ರೀಮಂತರು ಪಡೆಯಬಹುದಾದ ಶಿಕ್ಷಣವೆಂದು ಎರಡು ವರ್ಗಗಳಾಗಿದೆ.

ಇನ್ನು ಮೂರನೆಯ ಮಹತ್ವದ ಕ್ಷೇತ್ರವಾದ ಆರೋಗ್ಯ ಕ್ಷೇತ್ರದಲ್ಲಿಯೂ ಶರವೇಗದಲ್ಲಿ ಪ್ರಗತಿಯನ್ನು ಸಾಧಿಸಲಾಗುತ್ತಿದೆ. ಭಾರತೀಯರ ಸರಾಸರಿ ಆಯುಷ್ಯ ಅರವತ್ತನ್ನು ದಾಟಿದೆ. ಜನಸಂಖ್ಯೆ ೧೦೩ಕೋಟಿ ಮೀರಿದೆ.

ಇನ್ನು ನಾಲ್ಕನೆಯ ಮಹತ್ವದ ಕ್ಷೇತ್ರವಾದ ಕೈಗಾರಿಕಾ ಕ್ಷೇತ್ರ ಅಗಾಧವಾಗಿ ಬೆಳೆಯುತ್ತ ಹೋಗುತ್ತಿದ್ದರೂ ದೇಶದ ಅರ್ಥ ವ್ಯವಸ್ಥೆ ಮುನ್ನಡೆಯನ್ನು ಸಾಧಿಸುವುದರ ಬದಲು ಹಿನ್ನಡೆಯನ್ನು ಸಾಧಿಸುತ್ತಿದೆ. ಜನಸಾಮಾನ್ಯರೆಲ್ಲ ಕಂಗಾಲಾಗಿದ್ದಾರೆ. ದಿನ

ನಿತ್ಯದ ಆಹಾರ ಪದಾರ್ಥಗಳ ಉತ್ಪಾದನೆಗೆ ಮಹತ್ವ ಕೊಡುವುದರ ಬದಲು ಕಾರುಗಳ ಉತ್ಪಾದನೆಗೆ, ಮೊಬೈಲ್ಗಳ ಉತ್ಪಾದನೆಗೆ, ಟಿ.ವಿ.ಗಳ ಉತ್ಪಾದನೆಗೆ ಮತ್ತು ಇತರ ಐಶಾರಾಮಿ ವಸ್ತುಗಳ ಉತ್ಪಾದನೆಗೆ ಹೆಚ್ಚು ಆದ್ಯತೆಯನ್ನು ಕೊಡಲಾಗುತ್ತಿದೆ. ಊಟಕ್ಕೆ ಗತಿಯಿಲ್ಲದಿದ್ದರೂ ಪ್ರತಿಯೊಬ್ಬರ ಕೈಯಲ್ಲಿ ಮೊಬೈಲ್ ಬಂದು ಅದರಲ್ಲಿಯೇ ತನ್ನ ಕಷ್ಟವನ್ನು ಮರೆಯುವಸ್ಥಿತಿ ಉಂಟಾಗಿದೆ, ಪ್ರತಿಯೊಬ್ಬರ ಮನೆಯಲ್ಲಿ ಟಿ.ವಿ.ಬಂದು, ಅದನ್ನು ನೋಡುತ್ತ ಕೌಟುಂಬಿಕ ಸಮಸ್ಯೆಗಳನ್ನು ಮರೆಯುವ ಸ್ಥಿತಿ ಉಂಟಾಗಿದೆ. ಪೆಟ್ರೋಲ್, ಡಿಸೆಲ್ಗಳ ಬೆಲೆ ಹೆಚ್ಚಾಗುತ್ತಿದ್ದರೂ ಹೊಸ ಕಾರುಗಳ ಉತ್ಪಾದನೆ ಮತ್ತು ಖರೀದಿ ಅವ್ಯಾಹತವಾಗಿ ನಡೆಯುತ್ತಿದೆ. ಆಹಾರ ಪದಾರ್ಥಗಳ ಬೆಲೆ ಏರಿಕೆಯ ಜೋತೆಗೆ ನಿರ್ಮಾಣದ ಮೂಲ ವಸ್ತುಗಳಾದ ಸಿಮೇಂಟ್, ಕಬ್ಬಿಣ, ಇಟ್ಟಿಗೆ, ಕಲ್ಲು, ಮರಗಳು ಇತ್ಯಾದಿಗಳ ಬೆಲೆ ಆಕಾಶ ಮುಟ್ಟುತ್ತಿವೆ. ಸಾಮಾನ್ಯರಿಗೆ ಸಾಮಾನ್ಯ ಮನೆ ಕಟ್ಟಿಕೊಳ್ಳಲೂ ಸಾಧ್ಯವಾಗದೇ ಇರುವಾಗ ನಗರಗಳಲ್ಲಿ ಗಗನಚುಂಬಿ ಕಟ್ಟಡಗಳ ನಿರ್ಮಾಣವಾಗುತ್ತಿದೆ. ಹಳ್ಳಿಗಾಡಿನಲ್ಲಿ ತಲಾ ದೈನಂದಿನ ಖರ್ಚು ಇಪ್ಪತ್ತು ರೂಪಾಯಿಗಳಿಗೂ ಕಡಿಮೆಯಿರುವಾಗ ನಗರಗಳಲ್ಲಿ ಕೆಲವರ ಖರ್ಚು ಸಾವಿರ ರೂಪಾಯಿಗೂ ಹೆಚ್ಚಿದೆ. ಹಳ್ಳಿಗಳಿಂದ ನಗರಗಳಿಗೆ ಜನ ವಲಸೆ ಹೋಗುತ್ತಿದ್ದರೆ, ನಗರಗಳಲ್ಲಿಯ ಜನ ವಿದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.

ಆಹಾರ ಉತ್ಪಾದನೆ ಕಡಿಮೆಯಾಗುತ್ತಿದೆ. ಆಹಾರ ಬೆಳೆಯ ಬೇಕಾದ ಭೂಮಿಯೆಲ್ಲವೂ ಕಟ್ಟಡಗಳ ನಿರ್ಮಾಣಕ್ಕಾಗಿ ಉಪಯೋಗಿಸಲಾಗುತ್ತಿದೆ. ವ್ಯವಸಾಯಕ್ಕೆ ಅಗತ್ಯವಾದ ಭೂಮಿಯ ವಿಸ್ತಾರ ದಿನೇದನೇ ಕ್ಷೀಣಿಸುತ್ತಾಹೋಗುತ್ತಿದೆ. ಕೈಗಾರಿಕಾ ಕ್ರಾಂತಿ ಕೃಷಿಕ್ರಾಂತಿಗೆ ವೈರಿಯಾಗಿ ಎದಿರು ನಿಂತಿದೆ!

ಸ್ವಾತಂತ್ರ್ಯ ಬಂದ ಮೇಲೆ ದೇಶದ ಅಭಿವೃದ್ಧಿಯೊಂದಿಗೆ ಹಿಂಸೆಯೂ ಬೆಳೆಯುತ್ತಾ ಬಂದಿದೆ. ದೇಶದ ಎಲ್ಲ ರಾಜ್ಯಗಳಲ್ಲಿಯೂ ಹಿಂಸೆ ಇದೆ. ಒಂದರ್ಥದಲ್ಲಿ ದೇಶದ ನಿವಾಸಿಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಹಿಂಸಾಚಾರದಲ್ಲಿ ತೊಡಗಿದ್ದಾರೆ. ಹಿಂಸಾಚಾರವನ್ನು ನಿಲ್ಲಿಸಲು ಸರ್ಕಾರಕ್ಕೆ ಸಾಧ್ಯವಿಲ್ಲವಾಗಿದೆ. ಹಿಂಸಾಚಾರವನ್ನು ಹತ್ತಿಕ್ಕುವ ಕೆಲಸವನ್ನು ಸರ್ಕಾರ ಮಾಡಿದಷ್ಟು ಹಿಂಸೆ ವ್ಯಾಪಕವಾಗುತ್ತ ಹೋಗುತ್ತಿದೆ. ಈ ಹಿಂಸಾಚಾರದಲ್ಲೂ ಜಾತೀಯತೆ, ಧರ್ಮಾಚರಣೆ ಬೆರೆತಿದೆ! ಅನೇಕ ಸಾರ್ವಜನಿಕ ಹಿಂಸೆಗಳ ಹಿಂದೆ ಒಂದೊಂದು ಬಗೆಯ ಜಾತಿ ಪ್ರೇಮ, ಧರ್ಮ ಪ್ರೇಮ ಇರುತ್ತದೆ. ಆದ್ದರಿಂದ ಹಿಂಸೆ ವರ್ಗಕಲಹವಾಗಿ ಧರ್ಮಾಧರ್ಮದ ಮಧ್ಯದ ಕಲಹವಾಗಿ ಅವತಾರ ತಾಳುತ್ತಿದೆ. ಪರಿಣಾಮ ಸಾವಿರಾರು ಮುಗ್ಧ ಜನರ ಸಾವು. ದೇಶಕ್ಕೆ ಸ್ವತಂತ್ರ ಬಂದ ಈ ಅರವತ್ತು ವರ್ಷಗಳ ಅವಧಿಯಲ್ಲಿ ಈ ಬಗೆಯ ವಿವಿಧ ಹಿಂಸಾಚಾರಗಳ ಕಾರಣದಿಂದ ಸತ್ತವರ ಸಂಖ್ಯೆ ಒಂದು ಮಹಾಯುದ್ಧದಲ್ಲಿ ಸತ್ತವರ ಸಂಖ್ಯೆಗೆ ಸಮಾನವಾಗುತ್ತದೆ. ಯಾವ-ಯಾವ ಕಾರಣಗಳಿಂದ ಹಿಂಸೆಯಾಗುತ್ತಿದೆಯೋ ಆ ಕಾರಣಗಳನ್ನು ನಿವಾರಿಸಲು ಸರ್ಕಾರಕ್ಕಾಗಲಿ, ಜನತಾ ಸಂಘಟನೆಗಳಿಗಾಗಲಿ ಸಾಧ್ಯವಾಗಿಲ್ಲ. ದೇಶದಾದ್ಯಂತ ವಿಶ್ವವಿದ್ಯಾನಿಲಯಗಳು, ಶಾಲಾ ಕಾಲೇಜುಗಳು ಹರಡಿದ್ದರೂ, ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ದಶಲಕ್ಷಗಳಷ್ಟಾಗಿದ್ದರೂ, ಶಿಕ್ಷಕರ ಸಂಖ್ಯೆಯೂ ಅಗಾಧವಾಗಿದ್ದರೂ ಇವರೆಲ್ಲರಿಂದಲೂ ಹಿಂಸೆಯನ್ನು ತಡೆಯಲಾಗುತ್ತಿಲ್ಲ. ಶಿಕ್ಷಿತರ ಈ

ಪಡೆಯೊಂದಿಗೆ ಸೈನ್ಯ ಶಕ್ತಿಯೂ, ಪೋಲಿಸ್ ಶಕ್ತಿಯೂ ಇದ್ದರೂ ಹಿಂಸಾಚಾರವನ್ನು ನಿಲ್ಲಿಸಲಾಗುತ್ತಿಲ್ಲ. ಹಿಂಸಾಚಾರದ ಪ್ರಚೋದನೆಗೆ ದೇಶದಲ್ಲಿಯ ಆಂತರಿಕ ಕಾರಣಗಳೊಂದಿಗೆ ನರೆರಾಷ್ಟ್ರಗಳ ರಾಜಕೀಯ ನೀತಿಗಳೂ ದೇಶದಲ್ಲಿ ಹಿಂಸಾಚಾರದ ಪ್ರಚೋದನೆಗೆ ಕಾರಣವಾಗುತ್ತಿದೆ. ಹಿಂಸಾವಾದಿಗಳು ದೇಶದೊಳಕ್ಕೆ ನುಗ್ಗುವುದನ್ನು ತಡೆಯುವುದಕ್ಕಾಗಿ ದೇಶಗಳ ಗಡಿಯುದ್ದಕ್ಕೂ ಸಾವಿರಾರು ಕಿಲೋಮೀಟರ್ ಮುಳ್ಳುಬೇಲಿ ನಿರ್ಮಿಸಬೇಕಾದಂಥ ಅಸಾಮಾನ್ಯ ಕೆಲಸವನ್ನೂ ಮಾಡಬೇಕಾಗಿ ಬಂದಿದೆ. ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ತುಂಬಾ ಕಷ್ಟಕರವಾದ ಸನ್ನಿವೇಶದಲ್ಲಿ ದೇಶದ ಸೈನಿಕರು ಹಗಲಿರುಳು, ಇಡೀ ವರ್ಷವೂ ಕಾಯುತ್ತಾ ನಿಂತಿರಬೇಕಾದ ಪರಿಸ್ಥಿತಿ ಇದೆ.

ದೇಶದಲ್ಲಿ ಹಿಂಸಾಚಾರ ಹೆಚ್ಚಾಗುವುದಕ್ಕೆ, ಅಭಿವೃದ್ಧಿಯ ತಪ್ಪು ಪ್ರಯೋಗಗಳಾಗುವುದಕ್ಕೆ, ಸರ್ಕಾರದಲ್ಲಿ ಭ್ರಷ್ಟಾಚಾರ ಹೆಚ್ಚಾಗುವುದಕ್ಕೆ, ಹಣದುಬ್ಬರ ಹೆಚ್ಚಾಗುವುದಕ್ಕೆ ರಾಜಕೀಯ ಪಕ್ಷಗಳು ಬಹಳ ಮಟ್ಟಿಗೆ ಕಾರಣಗಳಾಗಿವೆ.

ದೇಶದ ಸಂಸತ್ತಾಗಲೀ, ರಾಜ್ಯಗಳಲ್ಲಿಯ ಶಾಸನ ಸಭೆಗಳಾಗಲೀ ತಮ್ಮ ಘನತೆ, ಗಾಂಭೀರ್ಯ ಕಳೆದುಕೊಂಡಿವೆ. ಅವು ದೇಶದ ಖಜಾನೆಯ ಮೇಲೆ ಭಾರವಾಗಿವೆ. ಅವು ಅನಿವಾರ್ಯವಾಗಿ ಸಹಿಸಲೇಬೇಕಾದ ದುಃಸ್ವಪ್ನಗಳಾಗಿವೆ. ಸಂವಿಧಾನಕ್ಕೆ ಕಿಂಚಿತ್ತೂ ಬೆಲೆ ಇಲ್ಲವಾಗಿದೆ. ಅದು ರಾಜಕೀಯ ಚಂಡಾಟದಲ್ಲಿ ಎಲ್ಲರ ಕಾಲೊದೆಗೆ ಸಿಕ್ಕುವ ಚೆಂಡಿನಂತಾಗಿದೆ. ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳ ಮಧ್ಯೆ ಹಗ್ಗದೆಳೆದಾಟ ನಡೆದಿದೆ. ಒಂದು ಇನ್ನೊಂದನ್ನು ಅವಿಶ್ವಾಸ ಭಾವನೆಯಿಂದಲೂ, ಅಮೈತ್ರಿ ಭಾವದಿಂದಲೂ ಕಾಣುತ್ತವೆ. ಈ ಮೂರು ವಿಭಾಗಗಳಲ್ಲಿಯ ಪರಸ್ಪರ ಅವಿಶ್ವಾಸ ದೇಶದ ಪ್ರಜೆಗಳನ್ನು ತಲ್ಲಣಗೊಳಿಸಿದೆ. ಅವರ ಜೀವನದಲ್ಲಿ ಅಶಾಂತಿಯ, ಅತೃಪ್ತಿಯ, ಅತಂತ್ರದ, ಭಯದ ಬಿರುಗಾಳಿಯನ್ನು ಎಬ್ಬಿಸಿದೆ.

ದೇಶದ ಎಲ್ಲ ನ್ಯಾಯಸ್ಥಾನಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ವಿವಾದಗಳು ವರ್ಷಾನುವರ್ಷ ತೀರ್ಮಾನ ಕೈಗೊಳ್ಳದೆ ನೆನೆಗುದಿಗೆ ಬಿದ್ದಿವೆ. ನ್ಯಾಯಸ್ಥಾನಗಳ ಬಗ್ಗೆ, ನ್ಯಾಯಾಧೀಶರ ಬಗ್ಗೆ ಮತ್ತು ನ್ಯಾಯವಾದಿಗಳ ಬಗ್ಗೆ ಜನರಲ್ಲಿ ಅವಿಶ್ವಾಸ ಭಾವನೆ ಮೂಡಿದೆ.

ಆರೋಗ್ಯ ರಕ್ಷಣೆ ತುಂಬಾ ದುಬಾರಿಯಾಗಿದೆ, ಆಸ್ಪತ್ರೆಗಳ ಸಂಖ್ಯೆ ಹೆಚ್ಚಾಗಿದೆ, ವೈದ್ಯರ ಸಂಖ್ಯೆ ಹೆಚ್ಚಾಗಿದೆ ಆದರೂ ಕೂಡ ಇಂದು ರೋಗಿಗಳಿಗೆ ಸೂಕ್ತ ಉಪಚಾರ ಸಕಾಲಕ್ಕೆ ಕಡಿಮೆ ಖರ್ಚಿನಲ್ಲಿ ದೊರೆಯುತ್ತಿಲ್ಲ. ಒಳ್ಳೆಯ ವೈದ್ಯಕೀಯ ಉಪಚಾರ ಸಮಾಜದ ಮೇಲ್ವರ್ಗಕ್ಕೆ ಮಾತ್ರ ಸೀಮಿತವಾಗಿದೆ. ಆಸ್ಪತ್ರೆಗಳಲ್ಲಿಯೂ ಭ್ರಷ್ಟಾಚಾರವಿದೆ. ಔಷಧ ತಯಾರಿಕಾ ಉದ್ಯೋಗದಲ್ಲಿ ಭಷ್ಟತೆ ಇದೆ. ವೈದ್ಯರಲ್ಲಿ ಸೇವಾ ಮನೋಭಾವ ಇಲ್ಲವಾಗಿದೆ; ಹಣ ಸಂಪಾದನೆಯೇ ಅವರ ಗುರಿಯಾಗಿದೆ. ಆಸ್ಪತ್ರೆಯವಾಸ ನರಕವಾಸವಾಗಿದೆ.

ದೇಶದ ಇಂದಿನ ಸ್ಥಿತಿಗೆ ಕಾರಣವಿಲ್ಲದೆ ಇಲ್ಲ. ಮುಖ್ಯ ಕಾರಣ ಭಾರತ ಪಾಶ್ಚಿಮಾತ್ಯ ರೀತಿಯ ಸಂಸ್ಕೃತಿಯನ್ನು, ಅಭಿವೃದ್ಧಿ ನೀತಿಯನ್ನು ಯಾವ ಮುಂದಾಲೋಚನೆಯೂ ಇಲ್ಲದೆ ಅನುಸರಿಸಿಕೊಂಡು ಹೋಗುತ್ತಿರುವುದು. ಸ್ವತಂತ್ರ

ಭಾರತ ಇಂಥ ಮೂರ್ಖತನದ ಕೆಲಸ ಮಾಡಬಾರದೆಂದು ರಾಷ್ಟ್ರಪಿತ ಮಹಾತ್ಮಾ ಗಾಂಧೀ ಇಂದಿಗೆ ಒಂದು ನೂರು ವರ್ಷಗಳ ಹಿಂದೆ ೧೯೦೮ರ ಸೆಪ್ಟಂಬರ್ ಮಾಹೆಯಲ್ಲಿ ಬರೆದ ಹಿಂದ್-ಸ್ವರಾಜ್ ಪುಸ್ತಕದ ಮೂಲಕ ಕಿವಿಮಾತು ಹೇಳಿದ್ದರು. ಆ ಮಾತನ್ನು ಭಾರತ ಆಲಿಸಿದಿದ್ದರೆ ಮೇಲೆ ವರ್ಣಿಸಲಾದಂಥ ಸಮಸ್ಯೆಗಳೂ ಭಾರತವನ್ನು ಕಾಡುತ್ತಿರಲಿಲ್ಲ. ಭಾರತವು ಸಮಸ್ಯೆಗಳ ಮಧ್ಯೆ ಮುಳುಗುತ್ತಿರಲಿಲ್ಲ.

ಈಗ ಗಾಂಧೀಜಿಯವರು ತಮ್ಮ ಹಿಂದ್-ಸ್ವರಾಜ್ಯದಲ್ಲಿ ಹೇಳಿದ್ದ ಕೆಲವು ಮುಖ್ಯ ಮಾತುಗಳನ್ನು ನೋಡೋಣ.

೧. ಆಧುನಿಕ ನಾಗರಿಕತೆ ವಸಹಾತುಶಾಹಿಗಿಂತ ಹೆಚ್ಚು ಅಪಾಯಕಾರಿ ಎಂದು ಹೇಳಿದ್ದರು. ಈಗ ಭಾರತದ ಆಧುನಿಕ ನಾಗರಿಕತೆಯ ಹಿಂದೆ ಓಡುತ್ತಿರುವ ಪರಿಣಾಮವೇ ಇಂದಿನ ಎಲ್ಲ ಸಮಸ್ಯೆಗಳಿಗೆ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಆಧುನಿಕ ನಾಗರಿಕತೆಯ ಸ್ವೀಕೃತಿಯ ಹಿಂದೆ ಇರುವ ಇಚ್ಛೆಯನ್ನು ಗಾಂಧೀಜಿ ಪ್ರಶ್ನಿಸಿದ್ದಾರೆ. ಇಷ್ಟೇ ಅಲ್ಲ ಭಾರತದ ದುರಾದೃಷ್ಟಕ್ಕೆ ಇಂಗ್ಲಿಷರು ಕಾರಣರಲ್ಲ ಆಧುನಿಕ ಸಂಸ್ಕೃತಿಗೆ ಮಾರುಹೋದ ಭಾರತೀಯರೇ ಕಾರಣ ಎಂದು ಅವರು ಘಂಟಾಘೋಷವಾಗಿ ಹೇಳಿದ್ದಾರೆ. ಕಾರ್ಖಾನೆಯ ನಾಗರಿಕತೆಯ ಮೇಲೆ ಅಹಿಂಸಕ ಸಮಾಜವನ್ನು ಕಟ್ಟುವುದು ಅಸಾಧ್ಯ ಎಂಬುದು ಅವರ ಸ್ಪಷ್ಟ ಅಭಿಮತವಾಗಿತ್ತು. ಈಗಲೂ ಆ ನಾಗರಿಕತೆಯನ್ನು ಹಿಂದ್-ಸ್ವರಾಜ್ ಪ್ರಶ್ನಿಸುತ್ತದೆ. ಹಿಂದ್-ಸ್ವರಾಜ್‌ದಲ್ಲಿ ಗಾಂಧೀಜಿ ಬೆಳೆಯುತ್ತಿರುವ ನಗರ ಕೇಂದ್ರಗಳ ಬಗ್ಗೆ ತಮ್ಮ ಗಾಬರಿಯನ್ನು ವ್ಯಕ್ತಪಡಿಸುತ್ತಾ ನಗರಗಳನ್ನು 'ಪ್ಲೇಗ್' ಹರಡುವ ತಾಣಗಳೆಂದು ಹೇಳಿದ್ದು ಇಂದಿನ ನಗರ ಮುಖಿ ಸಂಸ್ಕೃತಿಯನ್ನು ಪ್ರಶ್ನಿಸುವಂತಿದೆ. ಇದರೊಂದಿಗೆ ಗಾಂಧೀಜಿ ಭಾರತದ ಪ್ರಾಚೀನ ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕೆಂದು ಹೇಳಿದ ಮಾತು ಕೂಡ ಇಂದು ಅನ್ವಯಿಸುತ್ತದೆ. ಭಾರತದ ಸಂಸ್ಕೃತಿಯ ಸಮಾಧಿಯ ಮೇಲೆ ಆಧುನಿಕ ಸಂಸ್ಕೃತಿ ಬೆಳೆಯುತ್ತಿದೆ. ಆದ್ದರಿಂದಾಗಿ ದೇಶ ಎಂಥ ಅಧೋಗತಿಗೆ ಹೋಗುತ್ತಿದೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಪಾರ್ಲಿಮೆಂಟನ್ನು 'ಮಾತಾಡುವ ಅಂಗಡಿ'ಯೆಂದೂ, ಅದೊಂದು ಬಂಜೆ ಸಂಸ್ಥೆಯೆಂದೂ ಕರೆದಿರುವುದು ಎಷ್ಟೊಂದು ಸಮಂಜಸವಾಗಿದೆಯಲ್ಲ. ಭಾರತದ ಸಂಸ್ಕೃತಿಗೆ ಅರವತ್ತು ವರ್ಷಗಳಾದಮೇಲೂ ಇದು ಇನ್ನೂ ಬಾಲಿಶವಾಗಿ ವರ್ತಿಸುವುದಾದರೆ, ಅದು ಪ್ರೌಢನಾಗುವುದು ಯಾವಾಗ ಎಂಬ ಅವರ ಪ್ರಶ್ನೆಗೆ ಇನ್ನೂ ಉತ್ತರ ಸಿಗಬೇಕಾಗಿದೆ.

ವಕೀಲರ ಬಗ್ಗೆ, ವೈದ್ಯರ ಬಗ್ಗೆ, ಶಿಕ್ಷಣದ ಬಗ್ಗೆ, ಯಂತ್ರಗಳ ಬಗ್ಗೆ, ಆಧುನಿಕ ನಾಗರಿಕತೆಯ ಬಗ್ಗೆ ಗಾಂಧೀಜಿಯವರು ಹಿಂದ್-ಸ್ವರಾಜ್ಯದಲ್ಲಿ ಹೇಳಿರುವ ಮೂಲಭೂತ ವಿಚಾರಗಳು ಭಾರತ ಇಂದು ಅನುಸರಿಸುತ್ತಿರುವ ರೀತಿ-ನೀತಿಗಳೆಲ್ಲವನ್ನೂ ಪ್ರಶ್ನಿಸುತ್ತಿವೆ. ನೂರು ವರ್ಷಗಳ ಹಿಂದೆ ಅವರು ಎತ್ತಿದ್ದ ಪ್ರಶ್ನೆಗಳು ಒಂದು ಶತಮಾನದ ನಂತರವೂ ನವ-ನವೀನವಾಗಿವೆ. ಭಾರತ ಎದುರಿಸುತ್ತಿರುವ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಅದನ್ನು ಬಿಡುಗಡೆ ಮಾಡಬೇಕಾದರೆ ಭಾರತೀಯರು ಹಿಂದ್-ಸ್ವರಾಜ್‌ದಲ್ಲಿಯ ಮಾತುಗಳನ್ನು ಮನನ ಮಾಡಬೇಕು ಮತ್ತು ಅದನ್ನು ಅಳವಡಿಸಿಕೊಳ್ಳಬೇಕು. ಅದರಲ್ಲಿಯೇ ಭಾರತೀಯರ ಮತ್ತು ಭಾರತದ ಮುಕ್ತಿಯಿದೆ. * * *

ಮಹಿಳೆಯರ ಏಳಿಗೆಗಾಗಿ ಲೇಖನಿ ಎತ್ತಿದ ಸೀಮೋ ದ ಬುವಾ

– *ಬಿ.ಎಸ್.ವೆಂಕಟಲಕ್ಷ್ಮಿ*

ಸಾಮಾಜಿಕ ಬದುಕಿನುದ್ದಕ್ಕೂ ಹಲವಾರು ವಿಪರ್ಯಾಸಗಳು. ಅವುಗಳಲ್ಲಿ ಅನೇಕವು ಜೀವನವನ್ನೇ ಜರ್ಜರಿತಗೊಳಿಸುತ್ತವೆ. ಮನಸ್ಸಿಗೆ ಆಘಾತವನ್ನು ಉಂಟುಮಾಡುತ್ತವೆ. ನಮ್ಮನ್ನು ಕಿತ್ತು ತಿನ್ನುತ್ತವೆ. ಈಚಿನ ದಿನಗಳಲ್ಲಿ ಸಂಭವಿಸಿದಂಥ ಇಂತಹ ವಿಪರ್ಯಾಸಗಳಲ್ಲಿ ಕೆಲವು ಮಹಿಳೆಯರ ಬಾಳನ್ನು ನೇರವಾಗಿ ತಟ್ಟಿ ಅವರ ಪ್ರಗತಿಯನ್ನೇ ಪಲ್ಲಟಗೊಳಿಸುವಷ್ಟು ಕ್ರೂರವಾಗಿವೆ.

ಮಹಿಳೆಯರ ಅಸ್ತಿತ್ವವೇ ಅಲುಗಾಡುವಂಥ ಪರಿಸ್ಥಿತಿ ಕಂಡುಬರುತ್ತಿದ್ದು ನಮ್ಮ ಉಳಿವಿಗಾಗಿ, ಉನ್ನತಿಗಾಗಿ, ಸಮಾನ ಹಕ್ಕುಗಳಿಗಾಗಿ ನಾವು ಪುರುಷಪ್ರಧಾನ ಸಮಾಜವನ್ನು ಮೆಟ್ಟಿ ಮೇಲೇಳಬೇಕಾದ ಅಗತ್ಯ ಉಂಟಾಗುತ್ತಿರುವಾಗ, ಮಹಿಳೆಯರ ಸಂಘಟನೆಯನ್ನು ಕುರಿತು ನಾವು ಮತ್ತೆ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಇಂಥದೊಂದು ಸಂಕೀರ್ಣ ಕಾರ್ಯವನ್ನು ಕೈಗೊಳ್ಳುವ ಸಂದರ್ಭದಲ್ಲಿ ನಮಗೆ ಈಗಾಗಲೇ ಮಹಿಳೆಯರ ಬದುಕಿಗೊಂದು ಕ್ರಿಯಾಶೀಲ ಆಯಾಮವನ್ನು ಒದಗಿಸಿರುವ ಹಾಗೂ ಇವರ ಚಟುವಟಿಗೆಗಳಿಗೆ ಒಂದು ಉದ್ದೇಶವನ್ನು ಕಲ್ಪಿಸಲು ಹೆಣಗಾಡಿದ ಅನೇಕ ಸೃಜನಶೀಲರು ನೆನಪಾಗುತ್ತಾರೆ. ಇಂಥವರಲ್ಲಿ ಅತ್ಯಂತ ಪ್ರಮುಖಳೆನಿಸಬಹುದಾದ ವ್ಯಕ್ತಿಯೆಂದರೆ ಸಿಮೋ ದ ಬುವಾ, ಕಾದಂಬರಿಗಾರ್ತಿಯಾಗಿ, ಪ್ರಬಂಧಕಾರಳಾಗಿ, ಅಸ್ತಿತ್ವವಾದದ ಮುಂಚೂಣಿದಾರಳಾಗಿ ತಾನು ಯಾವ ಮಾಧ್ಯಮವನ್ನೇ ಆಯ್ದುಕೊಳ್ಳಲಿ ಅಥವಾ ಯಾವುದೇ ಆಯಾಮದಲ್ಲಿ ತೊಡಗಿರಲಿ, ಮಹಿಳೆಯರ ಏಳಿಗೆಯನ್ನೇ ತನ್ನ ಜೀವನಧ್ಯೇಯವನ್ನಾಗಿ ಹೊಂದಿದ್ದಂಥ ಸಿಮೋ ದ ಬುವಾ.

ಸಿಮೋ ನಮ್ಮ ಸಮಕಾಲೀನ ಫ್ರಾನ್ಸ್ ಸಮಾಜಕ್ಕೆ ಸೇರಿದವಳಾದರೂ, ಮಹಿಳೆಯರನ್ನು ಕುರಿತಂತೆ ಈಕೆ ಸೃಷ್ಟಿಸಿದ ಸಾಹಿತ್ಯ, ಮಹಿಳೆಯರನ್ನು ಪ್ರತಿಯೊಂದು ಮಟ್ಟದಲ್ಲೂ ಸೂಕ್ತ ರೀತಿಯಲ್ಲಿ ನಡೆಸಿಕೊಳ್ಳಬೇಕೆಂಬ ಬಗ್ಗೆ ಈಕೆ ಹೂಡುವ ವಾದಗಳು ಹಾಗೂ ವಿವಿಧ ಸ್ಥರಗಳಿಗೆ ಒಳಪಡುವ ಮಹಿಳೆಯರನ್ನು ಕುರಿತಂತೆ ಈಕೆ ನೀಡಿರುವ ಸಮರ್ಥ ವ್ಯಾಖ್ಯಾನಗಳು ಜಗತ್ತಿನ ಎಲ್ಲೆಡೆಗಳಲ್ಲೂ ವಿಪುಲವಾಗಿ ಓದಿಸಿಕೊಳ್ಳುತ್ತಲೇ ಇವೆ. ಇದಕ್ಕೆ ಕಾರಣ ಈಕೆಯ ಬರಹಗಳಲ್ಲಿ ಎಲ್ಲೆಡೆಗಳಲ್ಲಿನ ಸ್ತ್ರೀಯರು ತಮ್ಮ ಬದುಕನ್ನೇ ಕಂಡುಕೊಳ್ಳುವುದು. ದೇಶ ಮುಂದುವರೆದಿರಬಹುದು, ಇಲ್ಲದಿರಬಹುದು, ಆದರೆ ಮಹಿಳೆಯರ ಬದುಕಿಗೆ ಕೆಲವೊಂದು ನಿರ್ದಿಷ್ಟ ತೊಡಕುಗಳು ಎದುರಾಗುತ್ತಲೇ ಇರುತ್ತವೆ ಎಂಬ ಕಟು ಸತ್ಯವನ್ನು ಈಕೆಯ ಕೃತಿಗಳು ಸಾರುವ ರೀತಿ ಎಷ್ಟರ ಮಟ್ಟಿಗೆ ಪ್ರಬುದ್ಧವಾದದ್ದೆಂದರೆ, ಇವಳನ್ನು ಓದಿಕೊಂಡ ಪ್ರತಿ ಮಹಿಳೆಗೂ ತನ್ನ ಜೀವನವನ್ನೇ ಸಿಮೋಳ ಕೃತಿಗಳ ಬೆಳಕಿನಲ್ಲಿ ಪರಿಶೀಲನೆಗೆ ಒಡ್ಡಿಕೊಳ್ಳುವ ಹಂಬಲವುಂಟಾಗುತ್ತದೆ. ತಾನು ಸಾಗಬೇಕಾದ ದಿಕ್ಕಿನ ಬಗ್ಗೆ ಈ ಕೃತಿಗಳಲ್ಲಿನ ಮಾರ್ಗದರ್ಶಕ ಸೂತ್ರಗಳನ್ನು ಅವಲಂಬಿಸುವ ಅಗತ್ಯ ಅವುಗಳಲ್ಲಿ ತೀವ್ರವಾಗುತ್ತದೆ. ಆದ್ದರಿಂದಲೇ ಈಕೆ ಎಂದೆಂದಿಗೂ

ಪ್ರಸ್ತುತವೆನ್ನಿಸುತ್ತಾಳೆ. ಶ್ರೇಷ್ಠ ಬರಹಗಾರರ ಸಾಲಿನಲ್ಲಿ ನಿಲ್ಲುತ್ತಾಳೆ.

ಬರವಣಿಗೆಯಲ್ಲಿ ತೊಡಗಿದ ಸಂದರ್ಭದಲ್ಲಿ, ಕಾದಂಬರಿಯಾಗಿದ್ದರೆ ಕೇವಲ ತಂತ್ರ, ಭಾಷೆ ಹಾಗೂ ಇತರ ಸಾಹಿತ್ಯ ಪರಿಕರಗಳತ್ತ ಮಾತ್ರ ಗಮನವನ್ನು ಕೇಂದ್ರೀಕರಿಸದೆ, ಪ್ರಬಂಧವಾಗಿದ್ದರೆ ವಿವಿಧ ವಿಷಯಗಳ ಪ್ರತಿಪಾದನೆಯನ್ನು ಕೈಗೆತ್ತಿಕೊಳ್ಳದೆ ಮಹಿಳೆಯರ ಔನತ್ಯವನ್ನೇ ಕೇಂದ್ರವಾಗಿಟ್ಟುಕೊಂಡು ಇದರ ಸುತ್ತಲೇ ತನ್ನೆಲ್ಲ ಕೃತಿಗಳನ್ನು ಸೃಷ್ಟಿಸಿರುವ ಸಿಮೋ ದ ಬುವಾ ಸ್ತ್ರೀ ಸಾಮರ್ಥ್ಯವನ್ನು ಪ್ರತಿಪಾದಿಸುತ್ತಾಳೆ ಮಾತ್ರವಲ್ಲ ಅವರಿಗೆದುರಾಗುವ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಭೇಟಿಯಾದ ವ್ಯಕ್ತಿಗಳ ಸ್ವಭಾವಗಳ ಅನುಭವದಲ್ಲಿ ಇಂದಿನ ಮಹಿಳೆಯರು ಬೆಳೆಯ ಬೇಕಾದ ಬಗೆಯನ್ನು ನೇರವಾಗಿ ಅತ್ಯಂತ ಸ್ಪಷ್ಟವಾಗಿ ವಿವರಿಸುತ್ತಾಳೆ. ಮಹಿಳಾ ಜೀವನವನ್ನು ಓದುಗರ ಮುಂದೆ ಅನಾವರಣಗೊಳಿಸುತ್ತ, ಯಾವ ಪೂರ್ವಗ್ರಹದಿಂದಲೂ ಪೀಡಿತಳಾಗದೆ ಮಹಿಳೆಯರು ಬದುಕಬೇಕಾದ ರೀತಿ, ಮೂಡಿಸಿಕೊಳ್ಳಬೇಕಾದ ಆದರ್ಶಗಳು ಇವನ್ನು ಕುರಿತು ಬಿಚ್ಚು ಮನಸ್ಸಿನಿಂದ ಬರೆಯುವುದರಿಂದಲೇ ಇವಳ ಕೃತಿಗಳು ಅತ್ಯಂತ ನೈಜ ಚಿತ್ರಣಗಳೆನಿಸುತ್ತವೆ. ಓದುಗರಲ್ಲಿ, ಅದರಲ್ಲೂ ಮಹಿಳೆಯರಲ್ಲಿ, ಈಕೆ ತುಂಬುವ ಕೆಚ್ಚು, ಸ್ಥೈರ್ಯ ಹಾಗೂ ಧ್ಯೇಯಗಳು ಅಚ್ಚರಿಹುಟ್ಟಿಸುತ್ತವೆ.

ಸಿಮೋ ದ ಬುವಾಳ ವ್ಯಕ್ತಿತ್ವ ಇಷ್ಟು ಬಲಿಷ್ಠವಾಗಿ ರೂಪುಗೊಂಡಿದ್ದರ ಹಿನ್ನೆಲೆಯಲ್ಲಿ ಇವಳ ಜೀವನದ ಅನೇಕ ಪ್ರಸಂಗಗಳು ಎದ್ದು ಕಾಣುತ್ತವೆ. ಜನವರಿ ೯, ೧೯೦೮ರಂದು ಫ್ರಾನ್ಸ್‌ನ ಕಡು ಸಂಪ್ರದಾಯವಾದಿ ಕುಟುಂಬದಲ್ಲಿ ಹುಟ್ಟಿ, ವಕೀಲನಾಗಿದ್ದ ತಂದೆ ಹಾಗೂ ಅತೀ ಭಾವುಕಳಾದ ತಾಯಿಯ ಆಶ್ರಯದಲ್ಲಿ ಬೆಳೆದ ಇವಳು ಇನ್ನಿತರ ಅನೇಕ ಸೂಕ್ಷ್ಮಮತಿಗಳಂತೆಯೇ ಬಾಲ್ಯದಿಂದಲೇ ತನ್ನ ಪರಿಸರದ ಇಕ್ಕಟ್ಟನ್ನು, ಅದು ಒದಗಿಸಿದ್ದ ಮುಜುಗರಗಳನ್ನು ಧಿಕ್ಕರಿಸುತ್ತಲೇ ದೊಡ್ಡವಳಾದಳು. ಇವಳ ಬದುಕನ್ನು ಸಂಪೂರ್ಣವಾಗಿ ತಾನೇ ನಿಯಂತ್ರಿಸಿ, ತನ್ನ ಇರುವಿಕೆಯನ್ನು ಇವಳ ಮೇಲೆ ಹೇರಿ, ಇವಳ ಬದುಕನ್ನು ತಾನೇ ನಿರ್ದೇಶಿಸಬಯಸಿದ ತಾಯಿಯ ಸ್ವಭಾವ ಇವಳನ್ನು ಸಿಡಿಮಿಡಿಗುಟ್ಟಿಸುತ್ತದೆ. ತಾಯಿ ಮಗಳ ಮಧ್ಯೆ ಇರಬೇಕಾದ ಮಧುರ ಬಾಂಧವ್ಯವನ್ನು ಬತ್ತಿಸುತ್ತದೆ. ತಾಯಿಯ ಅತಿ ಮುಚ್ಚಟೆಯಿಂದಾಗಿ ತನಗಾದ ಕಿರಿಕಿರಿಯನ್ನು ಇವಳು ತನ್ನ ಆತ್ಮ ಕಥನದಲ್ಲಿ ಹೃದಯಸ್ಪರ್ಶಿಯಾಗಿ ತೋಡಿಕೊಂಡಿದ್ದಾಳೆ. ಸದಾ ತನಗೆ ಅಂಟಿಕೊಂಡಿದ್ದು, ತಾನು ಸ್ನೇಹಿತರೊಡನೆ ಆಟವಾಡುತ್ತಿದ್ದಾಗಲೂ ತನ್ನನ್ನು ಸ್ವತಂತ್ರಳನ್ನಾಗಿ ಬಿಡದೆ ಮಕ್ಕಳ ಪ್ರತಿ ಚಟುವಟಿಕೆಯಲ್ಲಿ ಭಾಗವಹಿಸುವುದು ತನ್ನ ಹಕ್ಕು ಎಂದು ಬಗೆದಿದ್ದ ತಾಯಿ ಬಾಲ್ಯದ ಮೊದಲ ವರ್ಷಗಳು ತನಗೆ ಒದಗಿಸಬಹುದಾಗಿದ್ದ ಮುಗ್ಧ ಕನಸಿನ ಜಗತ್ತನ್ನು ಹೇಗೆ ತಮ್ಮಿಂದ ಕಿತ್ತುಕೊಂಡಳೂ ಎಂಬುದನ್ನು ಹೇಳಿಕೊಳ್ಳುತ್ತಾಳೆ. ತಾಯಿಯ ಈ ಕಾಡುವಿಕೆಯಿಂದಾಗಿ ಸಿಮೋ ಮಗುವಾಗಿದ್ದಾಗ ಜಗತ್ತಿನ ನಿಗೂಢಗಳ ಬಗ್ಗೆ ಅಚ್ಚರಿ ಮೂಡಿಸಿಕೊಳ್ಳುವ ಅವಕಾಶವನ್ನೇ ಕಳೆದುಕೊಳ್ಳುತ್ತಾಳೆ. ಬಾಲ್ಯದಲ್ಲಿ ಸಿಮೋಳಿಗೆ ಇದ್ದದ್ದು ಒಂದೇ ತೀವ್ರ ಬಯಕೆ–ಅದೆಂದರೆ ದೊಡ್ಡವಳಾಗಿ ಬೆಳೆಯುವುದು; ತನಗೆ ಉಸಿರುಗಟ್ಟಿಸಿದ್ದ ಕುಟುಂಬದಿಂದ ದೂರ ಓಡುವುದು; ಪ್ರಬುದ್ಧ ಮಹಿಳೆಯಾಗಿ, ಮಾಗಿದ ಸ್ವತಂತ್ರ ವ್ಯಕ್ತಿಯಾಗಿ ರೂಪುಗೊಳ್ಳುವುದ. ತಂದೆ ತನ್ನ ತಾಯಿಯನ್ನು ಉದಾಸೀನದಿಂದ ಕಂಡಾಗ, ಅವಳಿಗೆ ಮಾತ್ರ ನಿಸ್ಪೃಹನಾಗದೆ ಬಾಳಿದಾಗ ಸಿಮೋಳ ಮನಸ್ಸು ಎಷ್ಟು

ರೋಸಿಹೋಗುತ್ತದೋ ಅಷ್ಟೇ ಅವಳಿಗೆ ಹೇಸಿಗೆಯನ್ನುಂಟುಮಾಡುವುದು ತಾಯಿ ಅವನನ್ನೇ ತನ್ನ ಜೀವನದ ಕೇಂದ್ರವೆಂದು ಬಗೆಯುತ್ತಿದುದು. ಇಷ್ಟೇ ಅಲ್ಲ ಬದುಕು ವಿಕಸನಗೊಳ್ಳಲು ಬಾಲ್ಯದಲ್ಲಿ ತಾನೆದುರಿಸಿದ ಇತಿಮಿತಿಗಳೂ ಅವಳಿಗೆ ಕ್ಷೋಭೆಯನ್ನುಂಟುಮಾಡುತ್ತವೆ. "ನನ್ನದು ಬಡಕುಟುಂಬವೊಂದರಲ್ಲಿ ಹುಟ್ಟಿದ ಫ್ರಾನ್ಸ್‌ನ ಬೂರ್ಜ್ವಾ ಬಾಲಕಿಯೊಬ್ಬಳ ಕಥನ. ನನ್ನ ದೇಶ ಹಾಗೂ ನನ್ನ ಕಾಲ ನನಗೆ ಒದಗಿಸಿದ್ದ ಸಾಮಗ್ರಿಗಳನ್ನು ಪಡೆದುಕೊಳ್ಳಲು ನನಗಿದ್ದ ಸಾಮರ್ಥ್ಯ ನನ್ನ ತಂದೆ ತಾಯಿಗಳ ಬಜೆಟ್ಟನ್ನು ಅವಲಂಬಿಸಿತ್ತು. ನಾನು ಏನನ್ನು ಕಲಿಯಬೇಕು, ಯಾವುದನ್ನು ಓದಬೇಕು ಎಂಬುದನ್ನು ನಾನಿದ್ದ ಸಮಾಜವೇ ನಿರ್ಧರಿಸುತ್ತಿತ್ತು" ಎಂದು ಅವಳು ಖೇದದಿಂದ ನುಡಿಯುತ್ತಾಳೆ. ಇಷ್ಟೆಲ್ಲ ಅಡೆತಡೆಗಳ ಮಧ್ಯೆಯೂ ಅವಳು ತತ್ವಶಾಸ್ತ್ರ ಪದವೀಧರೆಯಾಗುತ್ತಾಳೆ. ತಾಯಿಯ ಬಂಧನದಿಂದ ಕಳಚಿಕೊಂಡು, ತನ್ನದೇ ವ್ಯಕ್ತಿತ್ವವನ್ನು ರೂಪಿಸಿಕೊಂಡು, ಅತ್ಯುನ್ನತ ರೀರಿಯಲ್ಲಿ ಸ್ವತಂತ್ರ ವ್ಯಕ್ತಿಯಾಗಿ ಮೆರೆಯುತ್ತಾಳೆ. ಎಡಪಂಥೀಯ ರಾಜಕೀಯವನ್ನು ಮೆಚ್ಚಿ ಅನೇಕ ಪ್ರಗತಿಪರ ಚಳುವಳಿಗಳಲ್ಲಿ ಕ್ರಿಯಾಶೀಲಳಾಗಿ, ಸ್ತ್ರೀಯರು ಶೈಕ್ಷಣಿಕ ಕ್ಷೇತ್ರದಲ್ಲಿ ಎದುರಿಸುತ್ತಿದ್ದ ಅಸಮಾನತೆ, ವಿವಾಹಕ್ಕೆ ಸಂಬಂಧಿಸಿದ ಸವಕಲು ಕಾನೂನುಗಳು, ದುಡಿಯುವ ಮಹಿಳೆಯರನ್ನು ಸುತ್ತುವರಿದಿರುವ ಕಲುಷಿತ ವಾತಾವರಣ ಇವೆಲ್ಲದರ ವಿರುದ್ಧವೂ ಸೆಣೆಸಾಡುತ್ತಾಳೆ. ಹಿರಿಯರಿಗೆ ಯಾವ್ಯಾವ ಕ್ಷೇತ್ರದಲ್ಲಿ ಮುಕ್ತ ಬೆಳವಣಿಗೆಗೆ ಅವಕಾಶವಿದೆಯೋ ಅವುಗಳೆಲ್ಲದರ ಬಗ್ಗೆಯೂ ಅವಳು ಚಿಂತಿಸುತ್ತಾಳೆ; ತನ್ನದೇ ಪರಿಹಾರಗಳನ್ನು ಒದಗಿಸುತ್ತಾಳೆ. ಮಹಿಳೆಯರ ಪರಿಪೂರ್ಣ ವಿಕಸನಕ್ಕೆ ಅತ್ಯದ್ಭುತ ರೀತಿಯಲ್ಲಿ ತನ್ನ ಕಾಣಿಕೆಯನ್ನು ಸಲ್ಲಿಸುತ್ತಾಳೆ.

ವಿವಾಹವನ್ನು ಒಂದು ವ್ಯವಸ್ಥೆಯಲ್ಲಿ ಪರಿಶೀಲಿಸಿ ಅದು ಮಹಿಳೆಗೆ ಒಡ್ಡುವ ಸವಾಲುಗಳು ಹಾಗೂ ಅಸೌಕರ್ಯಗಳನ್ನು ಅತ್ಯಂತ ಉನ್ನತ ಮಟ್ಟದಲ್ಲಿ ಚರ್ಚಿಸುವ ಸಿಮೋ ತನ್ನ ಜನಪ್ರಿಯ ಹಾಗೂ ಅತ್ಯಮೂಲ್ಯ ಗ್ರಂಥವಾದ 'Second Sex'ನಲ್ಲಿ "ವಿವಾಹವೆಂಬ ಅವಶ್ಯಕತೆಯು ಗಂಡು-ಹೆಣ್ಣುಗಳಿಗೆ ಪರಸ್ಪರ ಸಮಾನತೆಯ ನೆಲೆಯಲ್ಲಿ ಸ್ಪಂದಿಸುವಂತಹ ವಾತಾವರಣವನ್ನು ಕಲ್ಪಿಸಿಲ್ಲ.... ಈಗ ಸ್ತ್ರೀಪುರುಷರಿಬ್ಬರೂ ಒಂದೇ ಅರ್ಥದಲ್ಲಿ ವಿವಾಹವನ್ನು ಸ್ವೀಕರಿಸುತ್ತಿಲ್ಲ. ಪುರುಷನು ಉತ್ಪಾದಕನ ಪಾತ್ರವನ್ನು ವಹಿಸಿದರೆ, ಸ್ತ್ರೀಯಾದವಳಿಗೆ ವಿವಾಹವೇ ಜೀವನದ ಪರಮೋದ್ದೇಶವೆಂಬ ನಂಬಿಕೆಯನ್ನು ಶತಮಾನಗಳಿಂದ ಆರೋಪಿಸಲಾಗಿದೆ" ಎಂದು ಹೇಳಿ ಮಹಿಳೆಯರ ವ್ಯಕ್ತಿತ್ವಕ್ಕೆ ಕಿಂಚಿತ್ತೂ ಮನ್ನಣೆ ನೀಡದ ಕೌಟುಂಬಿಕ ವ್ಯವಸ್ಥೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸುತ್ತಾಳೆ.

"ಒಬ್ಬಳು ಹೆಂಗಸು ತನ್ನ ಗಂಡ ತನ್ನನ್ನು ಯಾವ ರೀತಿಯಲ್ಲಿ ಮಾಟಗೊಳಿಸುತ್ತಾನೋ ಅದೇ ರೀತಿ ರೂಪಿತಗೊಳ್ಳುತ್ತಾಳೆ". ವಿವಾಹದ ಬಗ್ಗೆ ಇಂಥ ಧೋರಣೆಯನ್ನು ಚಿಕ್ಕಂದಿನಿಂದಲೂ ಬೆಳಸಿಕೊಂಡಿದ್ದರಿಂದಲೇ ಅವಳು ತತ್ವಜ್ಞಾನಿ ಜೀನ್ ಪಾಲ್ ಸಾರ್ತ್ರನೊಂದಿಗೆ ಹಲವಾರು ವರ್ಷಗಳನ್ನು ಕೇವಲ ಸಂಗಾತಿಯಾಗಿ ಕಳೆದದ್ದು. ತನ್ನ ಆತ್ಮ ಕಥನದ ಕೊನೆಯ ಭಾಗವಾದ 'All Said and Done' ಕೃತಿಯಲ್ಲಿ ಆಕೆ ತನ್ನನ್ನೇ ಪ್ರಶ್ನಿಸಿಕೊಳ್ಳುತ್ತಾಳೆ. "ನಾನು ಸಾರ್ತ್ರೆಯನ್ನು ಭೇಟಿಯಾಗಿರದಿದ್ದರೆ ನಾನು ಯಾವ ರೀತಿ ಬೆಳೆಯಬಹುದಾಗಿತ್ತು?.... ನಾನು ಹೇಳಲಾರೆ. ವಾಸ್ತವದ ಸಂಗತಿಯೆಂದರೆ ನಾನು ಅವನನ್ನು ಭೇಟಿಯಾದೆ ಹಾಗೂ ಇದೇ ನನ್ನ ಜೀವನದ ಮಹತ್ವಪೂರ್ಣ

ಘಟನೆ". ಸಿಮೋ ವಿವಾಹವೆಂಬ ಬಂಧನ ಉಂಟುಮಾಡುವ ಮುಜುಗರಗಳಿಗೆ ವಿರುದ್ಧಳಾಗಿದ್ದಾಳೇ ಹೊರತು ಗಂಡು-ಹೆಣ್ಣಿನ ಸಂಬಂಧವನ್ನೇ ಅವಳು ನಿರಾಕರಿಸುವುದಿಲ್ಲ ಎನ್ನುವುದನ್ನು ಇಲ್ಲಿ ಗಮನಿಸಬೇಕು. ಯೌವ್ವನದಿಂದಲೂ ಸಾರ್ವಜನಿಕ ಪ್ರತಿಕ್ರಿಯೆಗಳ ಬಗ್ಗೆ ಯಾವ ಎಗ್ಗನ್ನೂ ಬೆಳೆಸಿಕೊಳ್ಳದಿದ್ದರೂ ಸಾರ್ತ್ರೆನೊಡನೆ ಅವಳು ಹೊಂದಿದ್ದ ಸಂಬಂಧ ಸಾರ್ವಜನಿಕ ಚರ್ಚೆಯ ವಿಷಯವಾಗುತ್ತದೆ. "ನನಗೆ ಜನರಾಡಿಕೊಳ್ಳುವ ಪಿಸುಮಾತುಗಳು ಕೇಳುತ್ತಿದ್ದವು.... ಕೆಲವರು ನನ್ನೆಡೆಗೆ ಬೀರುತ್ತಿದ್ದ ನೋಟವನ್ನಂತೂ ಎದುರಿಸಲೂ ಕಷ್ಟವಾಗುತ್ತಿತ್ತು.... ಹಲವಾರು ವರ್ಷಗಳು ನಾನು ಸಾರ್ವಜನಿಕ ಸ್ಥಳಗಳಲ್ಲಿ ಕಾಣಿಸಿಕೊಳ್ಳುವುದನ್ನೇ ನಿಲ್ಲಿಸಿದೆ ಎಂಬುದಾಗಿ ಅವಳೇ ಹೇಳಿಕೊಂಡಿದ್ದಾಳೆ. ಇದು ಇನ್ನೊಂದು ರೀತಿಯಲ್ಲಿ ಯಾವ ರೀತಿಯ ಪ್ರಚಾರದ ಬಗ್ಗೆಯಾಗಲಿ ಅವಳಿಗಿದ್ದ ಅಸಹನೆಯನ್ನೂ ತೋರಿಸುತ್ತದೆ. ಟಿಲಿವಿಷನ್, ರೇಡಿಯೋ-ಸಂದರ್ಶನಗಳು, ಇವೆಲ್ಲವುಗಳಿಂದ ದೂರವೇ ಉಳಿದಿದ್ದ ಅವಳು ಸಾರ್ತ್ರೆನೊಡನೆ ತಾನು ಕಳೆದ ಭವ್ಯ ಕ್ಷಣಗಳು, ಅವನೊಡನಾಡಿದ ಮಾತುಕತೆಗಳು, ಅವನ ಸಾಹಿತ್ಯಕ ಸಾಧನೆಗಳು-ಪುರಸ್ಕಾರಗಳು, ಅವನ ರಾಜಕೀಯ ಧೋರಣೆಗಳು ಹಾಗೂ ಅವು ತನ್ನ ಮೇಲೆ ಉಂಟುಮಾಡಿದ ಪರಿಣಾಮ ಇವೆಲ್ಲವನ್ನೂ 'Adieu - A Farewell to Sartre', 'Force of circumstance', 'The Prime of life' ಕೃತಿಗಳಲ್ಲಿ ಹೇಳಿಕೊಳ್ಳುತ್ತಾಳೆ. ಸಾರ್ತ್ರೆ ತನಗಿಂತಲೂ ಮೊದಲು ಸತ್ತರೆ ಆ ನಷ್ಟವನ್ನು ಸಹಿಸಿಕೊಳ್ಳುವುದು ಹೇಗೆ ಎಂಬ ಭೀತಿ ಇಂಥ ದಿಟ್ಟ ಲೇಖಕಿಯನ್ನೂ ಕಾಡುತ್ತದೆ. ಆದರೆ ಆದುದ್ದಾದರೂ ಹಾಗೆಯೇ. ಅವಳ ಬದುಕನ್ನು ಎಲ್ಲ ರೀತಿಯಲ್ಲೂ ನಡೆಸಿದ ಸಾರ್ತ್ರೆ ಸತ್ತು ಕೊರಡಿನಂತೆ ಮಲಗಿದ್ದಾಗ ಅವನ ಶವದೊಂದಿಗೆ ಮಲಗಲು ಪ್ರಯತ್ನಿಸಿದ ಅವಳನ್ನು ಆಸ್ಪತ್ರೆಯ ಅಧಿಕಾರಿಗಳು ದೂರ ಸರಿಸಿ ಅವನಿಗೆ ತಗುಲಿದ್ದ 'ಗ್ಯಾಂಗರಿನ್' ಬಗ್ಗೆ ಎಚ್ಚರಿಕೆ ನೀಡಿದರೂ ಶವದ ಮೇಲೊಂದು ಬಟ್ಟೆಯನ್ನು ಹಾಸಿ, ಅವನ ಪಕ್ಕದಲ್ಲಿ ಒಂದೆರಡು ಕ್ಷಣಗಳು ಮಲಗಿದ್ದು ಏಳುತ್ತಾಳೆ. ಅವನು ಸತ್ತ ನಂತರ, ಅವನಿಗೆ ವಿದಾಯದ ರೂಪದಲ್ಲಿ ಪ್ರಕಟವಾದ 'Adieu - A Farewell to Sartre' ಕೃತಿಯ ಮೊದಲ ವಾಕ್ಯವಿದು: "ಮುದ್ರಣಕ್ಕೆ ಮೊದಲೇ ನಿನ್ನಿಂದ ಓದಿಸಿಕೊಳ್ಳಲ್ಪಡದಿದ್ದಂಥ ನನ್ನ ಮೊದಲ ಪುಸ್ತಕವಿದು. ಇದನ್ನು ಇಡಿಯಾಗಿ ಸಂಪೂರ್ಣವಾಗಿ ನಿನಗೊಪ್ಪಿಸಿದ್ದೇನೆ.... ನೀನು ನಿನ್ನ ಪುಟ್ಟ ಪೆಟ್ಟಿಗೆಯಲ್ಲಿ ಮಲಗಿದ್ದೀಯೆ. ನಾನೀಗ ನಿನ್ನ ಬಳಿಗೆ ಬರಲಾಗುವುದಿಲ್ಲ. ನನ್ನನ್ನು ನಿನ್ನ ಪಕ್ಕದಲ್ಲೇ ಹೂತರೂ ಸಹ, ನಮ್ಮಿಬ್ಬರ ಬೂದಿಗಳ ಮಧ್ಯೆ ಯಾವ ಸಂಪರ್ಕ ಏರ್ಪಡುವುದೂ ಸಾಧ್ಯವಿಲ್ಲ".

ಸಿಮೋ ದ ಬುವಾ ೧೯೮೬ರ ಏಪ್ರಿಲ್ ೧೪ರಂದು ನಿಧನಳಾದಾಗ ಅವಳು ತನ್ನ ಹಿಂದೆ ಬಿಟ್ಟು ಹೋದದ್ದು ಐತಿಹಾಸಿಕವಾಗಿ, ಜೈವಿಕವಾಗಿ, ವೈಜ್ಞಾನಿಕವಾಗಿ ಹಾಗೂ ಸಾಂಸ್ಕೃತಿಕವಾಗಿ, ಸ್ತ್ರೀಯರು ಶೋಷಿಸಲ್ಪಡುವ ರೀತಿಯನ್ನು ಸಮಗ್ರವಾಗಿ ವಿಶ್ಲೇಷಿಸುವ ಅಪೂರ್ವ ಕೃತಿಯಾದ 'Second Sex' ಅಲ್ಲದೆ ಕಾದಂಬರಿ, ನಾಟಕ, ಪ್ರಬಂಧಗಳನ್ನೊಳಗೊಂಡಂತೆ ೧೯೪೩ರಿಂದ ೧೯೮೧ರ ವರೆಗೆ ೧೭ ಕೃತಿಗಳನ್ನು. ಫ್ರೆಂಚ್ ಭಾಷೆಯಲ್ಲಿ ರಚಿತಗೊಂಡ ಇವಳ ಗ್ರಂಥಗಳಲ್ಲಿ ಅನೇಕವು ಇಂಗ್ಲಿಷ್‌ಗೆ ತರ್ಜುಮೆಗೊಂಡಿದ್ದು ಹಲವಾರು ಮುದ್ರಣಗಳನ್ನು ಕಂಡು ಪುರಸ್ಕೃತಗೊಂಡಿದ್ದರೂ

ಫ್ರಾನ್ಸ್‌ನಲ್ಲಿ ಲೇಖಕಿಯರ ಸ್ಥಿತಿಗತಿಯ ಬಗ್ಗೆ ಅವಳೇ ನೊಂದುಕೊಂಡಿರುವುದೂ ಉಂಟು. "ಫ್ರಾನ್ಸ್‌ನಲ್ಲಿ ಮಹಿಳೆಯೊಬ್ಬಳು ಲೇಖಕಿಯಾಗಿದ್ದರೆ ಅದು ಅವಳು ತನ್ನನ್ನು ಥಳಿಸಲು ಸಾರ್ವಜನಿಕರಿಗೆ ನೀಡಿದ ಬೆತ್ತವಾಗಿ ಪರಿಣಮಿಸುತ್ತದೆ. ಲೇಖಕಿ ಚಿಕ್ಕ ವಯಸ್ಸಿನವಳಾಗಿದ್ದರೆ ಅವಳ ಬರವಣಿಗೆ ಲೇವಡಿಗೆ ವಸ್ತುವಾಗುತ್ತದೆ, ಅವಳು ವಯಸ್ಸಾದವಳಾಗಿದ್ದರೆ ಮಾತ್ರ ಫ್ರಾನ್ಸ್‌ನ ಜನ ಗೌರವದಿಂದ ತಲೆಬಗ್ಗಿಸುತ್ತಾರೆ". ಪ್ರಾಯಶಃ ತನ್ನ ಮಹತ್ವಪೂರ್ಣ ಕೃತಿ 'Second Sex'ಗೆ ದೊರೆತ ವಸ್ತುನಿಷ್ಠವಲ್ಲದ, ವ್ಯಕ್ತಿನಿಷ್ಠ ಪ್ರತಿಕ್ರಿಯೆಗಳನ್ನು ಗಮನಿಸಿಯೇ ಅವಳು ಈ ಮಾತುಗಳನ್ನು ಬರೆದಿರಬಹುದು. ಪ್ರಕಟವಾದ ಮೊದಲ ವಾರದಲ್ಲಿಯೇ ೨೨ ಸಾವಿರ ಪ್ರತಿಗಳು ಮಾರಾಟವಾದರೂ ಕಾಮೂನಂತಹ ಲೇಖಕನೂ ಸಹ 'Second Sex' ನ್ನು ಅರ್ಧದಲ್ಲೇ ಬಿಸುಟು, "ಫ್ರೆಂಚ್ ಗಂಡಸರನ್ನು ಅಪಹಾಸ್ಯ ಮಾಡುತ್ತಿದ್ದೀಯೆಂದು" ಆರೋಪಿಸಿದ್ದು, ಪ್ರಖ್ಯಾತ ಸಮಾಜಶಾಸ್ತ್ರಜ್ಞ ಲೆವಿಸ್ಟ್ರಾಸ್ ಇದನ್ನು ಅವೈಜ್ಞಾನಿಕವೆಂದು ಕರೆದದ್ದೂ ಅವಳ ಮನಸ್ಸಿಗೆ ತಟ್ಟಿರಬೇಕು.

ಸಿಮೋ ದ ಬುವಾ ಮಹಿಳಾ ಚಳುವಳಿಗಳಲ್ಲಿ ಪಾತ್ರವಹಿಸದೆ ಕೇವಲ ಬುದ್ಧಿಜೀವಿಯಾಗಿ ಅದನ್ನು ವಿಶ್ಲೇಷಿಸಿದ್ದಾಳೆ ಎಂಬ ಟೀಕೆ ಇದ್ದರೂ ಅವಳು ಮಹಿಳೆಯರ ಸಮಸ್ಯೆಗಳನ್ನು ವಾಸ್ತವಿಕ ದೃಷ್ಟಿಯಿಂದ ನೋಡಿ ತನ್ನ ಬರವಣಿಗೆ ಹಾಗೂ ವಿಶ್ಲೇಷಣೆಗೆ ಹೊಸ ಆಯಾಮವನ್ನಿತ್ತಳು ಎಂಬುದನ್ನು ನಾವು ಮರೆಯಬಾರದು.

ಸಾಭಾರ : ಅನಿಕೇತನ

ಸಂತಾಪ

ಸಾಂಪ್ರದಾಯಿಕ ವ್ಯವಸಾಯ ಪದ್ಧತಿಯನ್ನು ಸಾರಾಸಗಟಾಗಿ ತಿರಸ್ಕರಿಸಿ, ಅದರ ಬದಲಾಗಿ ನಿಸರ್ಗ ಆಧಾರಿತ ಸಹಜಕೃಷಿಯನ್ನು ಆಧುನಿಕ ಜಗತ್ತಿಗೆ ಪರಿಚಯಿಸಿ ಮಾನವಕುಲವನ್ನು ಮಾರಣಾಂತಿಕ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಮತ್ತು ಕೃಷಿಯಂತ್ರಗಳಿಂದ ಮುಕ್ತಿಗೊಳಿಸಿದ 'ಒಂದು ಹುಲ್ಲಿನ ಕ್ರಾಂತಿ' ಪುರುಷ ಮಸನೊಬು ಫುಕುವೊಕಾ ೨೦೦೮ ಆಗಸ್ಟ್ ೧೩ ರಂದು ಭೂಮಿತಾಯಿಯ ಪ್ರೀತಿಯ ಮಗಳಾದ ಹಸಿರು ಗರಿಕೆಗಳೊಂದಿಗೆ ಲೀನವಾದರು. ಫುಕುವೊಕಾರ ನಿಧನಕ್ಕಾಗಿ 'ಜನಪದ ವಿಚಾರ' ಅಂತಃಕರಣ ಪೂರ್ವಕವಾಗಿ ಸಂತಾಪವನ್ನು ವ್ಯಕ್ತಪಡಿಸುತ್ತದೆ.

* * *

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ, ಪತ್ರಿಕಾ ಕ್ಷೇತ್ರದಲ್ಲಿ ಅಳಿಸಿಹೋಗದೇ ಇರುವಂಥ ಸಾಧನೆ ಮಾಡಿದ್ದ ನಿರಹಂಕಾರಿ ಸ್ನೇಹಮಯಿ, ಯುವ ಸಾಹಿತಿಗಳ ಮಾರ್ಗದರ್ಶಿ ಎಚ್.ಎಸ್.ಕೃಷ್ಣಯ್ಯಂಗಾರ್ ಅವರು ಕಳೆದ ತಿಂಗಳು ಕನ್ನಡ ಸಾಹಿತ್ಯದಲ್ಲಿಯೇ ಲೀನವಾದರು. ಎಚ್ಚೆಸ್ಕೆ ಅವರ ನಿಧನಕ್ಕಾಗಿ 'ಜನಪದ ವಿಚಾರ' ತನ್ನ ಹೃದಯಾಳದ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಜನಪದ ವ್ಯಕ್ತಿ

ಹೊಳಲಕೆರೆ ಆರ್. ಚಂದ್ರಶೇಖರ್

– ಕೃಷ್ಣ ವಟ್ಟಂ

ಇವರು ಅಮೇರಿಕಾದಲ್ಲಿದ್ದುಕೊಂಡು ಕನ್ನಡ ಸಾಹಿತ್ಯಕ್ಕೆ ಅಮೋಘ ಸೇವೆ ಸಲ್ಲಿಸಿದ್ದಾರೆ. ೨೩೨ ತಾಳೆಗರಿಯಲ್ಲಿ ೧೧,೬೮೨ ಪದ್ಯಗಳನ್ನು ಹೊಂದಿರುವ ಕರ್ನಾಟಕ ಭಾಗವತದ ಗೂಢಾರ್ಥವನ್ನು ಕಂಡು ಹಿಡಿಯುವ ಬೃಹತ್ ಕೆಲಸವನ್ನು ಇವರು ಮಾಡಿದ್ದಾರೆ. ಇವರು ಮೂಲತಃ ಕೊಲಂಬಿಯಾದಲ್ಲಿ ಮಿಸ್ಸೋರಿ ವಿಶ್ವವಿದ್ಯಾನಿಯಲದಲ್ಲಿ ಪ್ರಾಧ್ಯಾಪಕರು. ತಮ್ಮ ಈ ಕೆಲಸದ ಒತ್ತಡದ ಮಧ್ಯೆಯೂ ಈ ಗ್ರಂಥವನ್ನು ಪರಿಚಿತ ಲಿಪಿಯಲ್ಲಿ ಬರೆಯುವ ಕೆಲಸವನ್ನು ನಿರ್ವಹಿಸಿದ್ದಾರೆ. ಇವರು ಬರೆದ ಸಾಮಗ್ರಿ ಎರಡು ಸಂಪುಟಗಳಷ್ಟಾಗುತ್ತದೆ. ಪ್ರತಿಯೊಂದು ಸಂಪಟವೂ ೬೦೦ ಪುಟಗಳನ್ನು ಹೊಂದಿವೆ. ವೈಷ್ಣವ ಸಿದ್ಧಾಂತದ ಈ ಕರ್ನಾಟಕ ಭಾಗವತವನ್ನು ಬೆಳಕಿಗೆ ತರಲು ಚಂದ್ರಶೇಖರ್‌ರವರು ತಮ್ಮ ಸಮಯದ ಅಮೂಲ್ಯವಾದ ೧೦೦೦ ಗಂಟೆಗಳನ್ನು ವ್ಯಯಮಾಡಿದ್ದಾರೆ. ೨೩೨ ತಾಳೆಗರಿಯಲ್ಲಿ ಕ್ಲಿಷ್ಟತೆಯಿಂದ ಕೂಡಿದ ಮತ್ತು ತಾಳೆಗರಿಯ ಎರಡೂ ಭಾಗಗಳಲ್ಲೂ ಬರೆಯಲಾಗಿದ್ದ ಈ ಗ್ರಂಥವು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ತಮ್ಮ ಪೂರ್ವಜರ ಮನೆಯಲ್ಲಿ ಅಕಸ್ಮಾತ್ ಆಗಿ ದೊರೆಯಿತು. ಈ ಗ್ರಂಥವು ತಲೆಮಾರಿನಿಂದ ತಲೆಮಾರಿಗೆ ಸುರಕ್ಷಿತವಾಗಿ ಹಸ್ತಾಂತರಗೊಳ್ಳುತ್ತಾಬಂದಿದೆ. ಈ ಗ್ರಂಥವು ಪೂಜಾ ವಸ್ತುವಾಗಿ ಹಬ್ಬ ಹರಿದಿನಗಳಂದು ಪೂಜಿಸಲ್ಪಡುತ್ತಾಬಂದಿದೆ. ಪ್ರೋ. ಚಂದ್ರಶೇಖರ್ ತಮ್ಮ ಬಾಲ್ಯವನ್ನು ಈ ಪೂರ್ವಜರ ಮನೆಯಲ್ಲಿ ಕಳೆದಿದ್ದರೂ ಕೂಡ ಅವರಿಗೆ ಈ ಗ್ರಂಥದ ಬಗ್ಗೆ ಲವಲೇಶವೂ ಗೊತ್ತಿರಲಿಲ್ಲ. ಈ ಗ್ರಂಥವು ೫೦೦ ವರ್ಷಗಳ ಹಿಂದೆ ನಿತ್ಯಾತ್ಮ ಸುಖಯೋಗಿ ಎಂಬುವವರು ರಚಿಸಿದ್ದರು. ತಮ್ಮ ಹಿಂದಿನ ತಲೆಮಾರಿನವರಲ್ಲಿ ಒಬ್ಬರಾಗಿದ್ದ ರಮಣಯ್ಯ ಅನ್ನುವವರು ಈ ರಚನೆಯನ್ನು ತಾಳೆಗರಿಯ ಮೇಲೆ ಬರೆದಿದ್ದಾರೆಂಬುದು ಸಹ ಚಂದ್ರಶೇಖರ್‌ರವರಿಗೆ ಗೊತ್ತಿರಲಿಲ್ಲ. ದೈವಲೀಲೆಯೋ ಎಂಬಂತೆ ಚಂದ್ರಶೇಖರ್‌ರವರು ಒಂದು ಸಮ್ಮೇಳನದಲ್ಲಿ ಭಾಗವಹಿಸಲು ೧೯೯೧ರಲ್ಲಿ ಬೆಂಗಳೂರಿಗೆ ಬಂದಾಗ ತಮ್ಮ ಚಿಕ್ಕಪ್ಪನ ಮಗ ಶೇಷಗಿರಿರಾವ್ ಈ ಗ್ರಂಥದ ಹಸ್ತಪ್ರತಿ ಹೊಂದಿದ್ದಾರೆಂದು ಗೊತ್ತಾಯಿತು. ಆ ಮಾರನೇ ವರ್ಷವೇ ಅದನ್ನು ಚಂದ್ರಶೇಖರ್‌ರವರು ಪಡೆದುಕೊಂಡರು. ಇಷ್ಟು ದೀರ್ಘಕಾಲ ಬೇರೆ ಬೇರೆ ಮನೆಗಳನ್ನು ಹೊಕ್ಕ ಈ ಗ್ರಂಥವು ಇನ್ನೂ ಸುಸ್ಥಿತಿಯಲ್ಲಿ ಇದ್ದುದನ್ನು ನೋಡಿ ಚಂದ್ರಶೇಖರ್‌ರವರಿಗೆ ಆಶ್ಚರ್ಯವಾಯಿತು. ಮೊದಲು ಅದನ್ನು ಓದಿದಾಗ ಅದು ನಾಶಯೋಗ್ಯವೆಂದೇ ಅವರಿಗೆ ಅನಿಸಿತು. ಆದರೆ ಅವರು ಅದರ ಸೂಕ್ಷ್ಮಗ್ರಾಹಿ ಚಿತ್ರವನ್ನು ತಯಾರಿಸಿ ನಿರ್ಬಂಧಿತ ವಾತಾವರಣದಲ್ಲಿಡಲು ತೀರ್ಮಾನಿಸಿದರು. ಈ ಪುಸ್ತಕದಲ್ಲಿದ್ದ ಸೂಕ್ಷ್ಮಗ್ರಾಹಿ ಚಿತ್ರವನ್ನು ಬರಹದಲ್ಲಿಳಿಸಲು ಹತ್ತು ವರ್ಷಕ್ಕೂ ಹೆಚ್ಚು ಸಮಯ ಬೇಕಾಯಿತು. ಈ ವಿಷಯವನ್ನು ಚಂದ್ರಶೇಖರ್‌ರವರು ಅಮೇರಿಕಾದಲ್ಲಿಯ ತಮ್ಮ ಸ್ನೇಹಿತರೊಂದಿಗೆ ಚರ್ಚಿಸಿದರು. ಅವರ ಕನ್ನಡ ಅಭಿಮಾನಿ ಮಿತ್ರರು ಈ ಗ್ರಂಥವನ್ನು ಬೆಳಕಿಗೆ ತರುವಲ್ಲಿ ತಮ್ಮ ಸಹಾಯದ ಹಸ್ತವನ್ನು ನೀಡಿದರು.

ಪ್ರೊ.ಚಂದ್ರಶೇಖರ್‌ರವರು ಈ ಗ್ರಂಥವನ್ನು ಮೈಸೂರಿನಲ್ಲಿಯ ವಿದ್ವಾಂಸರ ಸಹಕಾರದೊಂದಿಗೆ ಸಂಪಾದಿಸಲು ಪ್ರಾರಂಭಿಸಿದರು. ಒಂದು ಸಂಪಾದಕ ಮಂಡಳಿಯನ್ನೂ ಸಹ ರಚಿಸಿದರು. ಎಲ್ಲರ ಪರಿಶ್ರಮದಿಂದ ಎರಡು ವರ್ಷಗಳ ತರುವಾಯ ಈ ಗ್ರಂಥ ಸಿದ್ಧವಾಯಿತು. ಓದುಗರು ಈ ಗ್ರಂಥದ ಮಹತ್ವವನ್ನು ಮೆಚ್ಚುವರೆಂದು ಚಂದ್ರಶೇಖರ್ ಆಶಿಸಿದರು. ಈ ಪುಸ್ತಕದ ಟಿಪ್ಪಣಿಗಳನ್ನು ಇಂಗ್ಲಿಷ್‌ಗೂ ಭಾಷಾಂತರಿಸಿ ಕನ್ನಡ ಬಾರದವರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಭಾಗವತ ಪುರಾಣವು ರಾಮಾಯಣ ಮತ್ತು ಮಹಾಭಾರತದ ನಂತರ ಅತಿ ಪ್ರಸಿದ್ಧವಾದ ಮತ್ತು ಪವಿತ್ರವಾದ ಪಠ್ಯವಾಗಿದೆ. ಈಗ ಮೊದಲ ಬಾರಿಗೆ ಕರ್ನಾಟಕ ಭಾಗವತದ ಗ್ರಂಥವು ಪರಿಷ್ಕೃತಗೊಂಡು ಪೂರ್ಣರೂಪದಲ್ಲಿ ಪ್ರಕಾಶಿತಗೊಂಡಿದೆ.

(ಸಾಭಾರ : ಡೆಕ್ಕನ್ ಹೆರಾಲ್ಡ್)

ಸಂಗೀತ ಕಲಾವಿದರು – ೧೪

ದ್ರುಪದ ಗಾಯಕ ಪ್ರೇಮ್ ಕುಮಾರ್ ಮಲ್ಲಿಕ್

ಬಿಹಾರದ ದರ್ಭಾಂಗದ ದ್ರುಪದ ಪರಂಪರೆ ಮತ್ತು ಮಲ್ಲಿಕ್ ಪರಿವಾರ ಎರಡೂ ಒಂದೇ. ಪಂಡಿತ್ ಪ್ರೇಮ್ ಕುಮಾರ್ ಮಲ್ಲಿಕ್ ದರ್ಭಾಂಗ್ ಪರಂಪರೆಯ ಪ್ರಸಿದ್ಧ ಪರಿವಾರಕ್ಕೆ ಸಂಬಂಧಿಸಿದವರಾಗಿದ್ದಾರೆ. ತಮ್ಮ ಬಾಲ್ಯಾವಸ್ಥೆಯಲ್ಲಿಯೇ ತಮ್ಮ ತಂದೆ ಪಂಡಿತ್ ವಿದುರ್ ಮಲ್ಲಿಕ್ ಅವರ ಮಾರ್ಗದರ್ಶನದಲ್ಲಿ ದ್ರುಪದ ಕುಮಾರರು ಶಿಕ್ಷಣ ಪಡೆದರು. ಈಗ ಅವರ ತಂದೆ ಇಲ್ಲ. ಅವರು ಪ್ರಸಿದ್ಧ ದ್ರುಪದ ಗಾಯಕರಾಗಿದ್ದರು. ದ್ರುಪದ ಮಲ್ಲಿಕರು ತಮ್ಮ ತಾತ ದಿವಂಗತ ಸುಖದೇವ ಮಲ್ಲಿಕರಿಂದಲೂ ಮಾರ್ಗದರ್ಶನ ಪಡೆದರು. ದ್ರುಪದ ಮತ್ತು ಖಯಾಲ್ ಎಂಬೀ ಎರಡರಲ್ಲಿಯೂ ಆಕಾಶವಾಣಿಯ ಉಚ್ಚಶ್ರೇಣಿಯ ಕಲಾಕಾರರಾಗಿರುವುದಲ್ಲದೆ ಪ್ರೇಮ್ ಕುಮಾರ್ ಮಲ್ಲಿಕ್ ದ್ರುಪದ ಗಾಯನ ಮತ್ತು ಬಾಹ್ಯ ಶಿಕ್ಷಣ ಶ್ರೇಷ್ಠ ಸಂಗೀತ ಪ್ರಶಿಕ್ಷಣ ಕೇಂದ್ರಗಳೊಂದಿಗೆ ಸಂಬಂಧವಿರಿಸಿಕೊಂಡಿದ್ದಾರೆ. ವರ್ತಮಾನದಲ್ಲಿ ಅವರು ಉತ್ತರ ಅಮೇರಿಕಾ ದ್ರುಪದ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಲ್ಲಿಕ್ ರವರ ಹಾಡುಗಾರಿಕೆ ಕಂಧರ್ವಾಣಿ ಮತ್ತು ಗೌಬರವಾಣಿಯ ಉಪಯೋಗದಿಂದ ವೈಶಿಷ್ಟತೆಯನ್ನು ಪಡೆದಿವೆ. ಇವಲ್ಲದೆ ಲಯಕರಿ ಮತ್ತು ತಿಹಾಯಿಗಳನ್ನು ಕೂಡ ಉಪಯೋಗಿಸುತ್ತಾರೆ. ಈ ಎಲ್ಲ ರಾಗಗಳ ಮಧುರತೆಯನ್ನು ಯಾವುದೇ ದೋಷವಿಲ್ಲದೆ ಹೊರ ಹೊಮ್ಮಿಸುವುದನ್ನು ಗಮನಿಸಿದಾಗ ಇವರು ಎಂಥ ಪರಿಶ್ರಮದ ಪ್ರಶಿಕ್ಷಣವನ್ನು ಹೊಂದಿ ಶ್ರೇಷ್ಠ ಕಲಾಕಾರರಾಗಿದ್ದಾರೆಂಬುದು ಗೊತ್ತಾಗುತ್ತದೆ. ಪಂಡಿತ್ ಮಲ್ಲಿಕ್‌ರವರು ಖಯಾಲ್, ಠುಮರಿ, ಟಪ್ಪಾ ಮತ್ತು ಇಂಪಾದ ಭಜನೆಗಳನ್ನು ಹೇಳುವುದರಲ್ಲಿಯೂ ಪರಿಣಿತಿಯನ್ನು ಪಡೆದಿದ್ದಾರೆ. ಇವರು ಶ್ರೇಷ್ಠ ಕಲಾಕಾರರಾಗಿರುವುದರ ಜೊತೆಗೆ ಉತ್ತಮ ಅಧ್ಯಾಪಕರೂ ಆಗಿದ್ದಾರೆ. ಈಗ ಅವರು ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಸಂಗೀತ ವಿಭಾಗದ ಉಪನ್ಯಾಸಕರಾಗಿದ್ದಾರೆ. ಇವರು ಭಾರತದಲ್ಲಿ ಮತ್ತು ವಿದೇಶದಲ್ಲಿ ಅನೇಕ ಪ್ರತಿಷ್ಠಿತ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ.

* * *

ಮಂಗಳ ಲೋಕದಲ್ಲಿ ಮಾನವನ ಪ್ರತಿನಿಧಿ ಫೀನಿಕ್ಸ್!

– ರಜನಿ.ಎಂ.ಜಿ

ಮೇ ೨೫. ನಾವೆಲ್ಲರೂ ಅಂದು ವಿಧಾನಸಭೆ ಚುನಾವಣಾ ಫಲಿತಾಂಶದ ಲೆಕ್ಕಾಚಾರದಲ್ಲಿ ಮುಳುಗಿರುವಾಗ ಮಂಗಳನ ಅಂಗಳದಲ್ಲಿ ಹೊಸ ಧೂಳು ಏಳುತ್ತಿತ್ತು. ನಾಸಾ ಕಳುಹಿಸಿದ್ದ ಫೀನಿಕ್ಸ್ ಗಗನನೌಕೆ ಮಂಗಳನ ಕೆಂಪು ನೆಲದ ಮೇಲೆ ನಿಧಾನವಾಗಿ ಕಾಲೂರುತ್ತಿತ್ತು. ಕಣ್ಣು ಮಿಟುಕಿಸಿದೆ ಅದನ್ನೇ ನೋಡುತ್ತಾ ಕುಳಿತಿದ್ದ ವಿಜ್ಞಾನಿಗಳ ತಂಡಕ್ಕೆ ಒಮ್ಮೆ ಸಮಾಧಾನದ ನಿಟ್ಟುಸಿರು, ಮರುಕ್ಷಣವೇ ಮುಂದಿನ ಕಾರ್ಯಗಳ ಧಾವಂತ. ವಿಜ್ಞಾನಿಗಳ ಆ ಉದ್ವೇಗಕ್ಕೂ ಕಾರಣವಿದೆ. ಮಂಗಳನಲ್ಲಿಗೆ ಗಗನನೌಕೆಗಳನ್ನು ಕಳುಹಿಸುವ ಹಿಂದಿನ ಎರಡು ಯೋಜನೆಗಳೂ ವಿಫಲಗೊಂಡಿದ್ದವು. ೧೯೯೯ರಲ್ಲಿ ಮಂಗಳ ಗ್ರಹದ ತನಕ ಹೋಗಿ ಅದರ ಭೂ ಭಾಗಕ್ಕೆ ಡಿಕ್ಕಿ ಹೊಡೆದು ಸ್ಫೋಟಗೊಂಡ ಮಾರ್ಸ್ ಕ್ಲೈಮೇಟ್ ಆರ್ಬಿಟರ್, ಅನಂತರದ ಮಾರ್ಸ್ ಪೋಲಾರ್ ಲ್ಯಾಂಡರ್‌ನ ಸೋಲು ಎಷ್ಟು ಅವಮಾನಕರವಾಗಿತ್ತೆಂದರೆ ೨೦೦೧ರ ಮೂರನೇ ಯೋಜನೆಯನ್ನು ಮುಂದುವರೆಸುವ ಪ್ರಯತ್ನವನ್ನೇ ನಾಸಾ ಕೈಬಿಟ್ಟಿತು. ಹೀಗೆ ಸಾಲು ಸಾಲು ಸೋಲುಗಳಿಂದ ವಿಜ್ಞಾನಿಗಳು ಕಂಗೆಟ್ಟಿರುವಾಗ, ಸೋಲಿನ ಬೂದಿಯಿಂದ ಹೊರಬಂದು ಯಶಸ್ವಿಯಾದ ಫೀನಿಕ್ಸ್ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡಿದ್ದೇ ವಿಜ್ಞಾನಿಗಳ ಸಂತಸಕ್ಕೆ ಕಾರಣ.

ಸುಮಾರು ಭೂಮಿಯಷ್ಟೇ (ನೀರಿರುವ ಭಾಗವನ್ನು ಹೊರತುಪಡಿಸಿ) ದೊಡ್ಡದಿರುವ, ಇದರಂತೆಯೇ ಜ್ವಾಲಾಮುಖಿ, ಮರುಭೂಮಿ, ಪರ್ವತ, ಕಣಿವೆ, ಹಿಮಾವೃತ ಧ್ರುವ ಪ್ರದೇಶಗಳಿರುವ ಮಂಗಳಗ್ರಹದ ಬಗ್ಗೆ ಎಲ್ಲರಿಗೂ ವಿಶೇಷ ಸೆಳೆತ. ಈಗ ಮಾತ್ರವಲ್ಲ ಹಿಂದಿನಿಂದಿಲೂ ಈ ಕೆಂಪು ಗ್ರಹದ ಬಗ್ಗೆ ವಿಪರೀತ ಕಲ್ಪನೆಗಳು, ವಿಚಿತ್ರ ಎನಿಸುವಂಥ ನಂಬಿಕೆಗಳಿವೆ. ಅಲ್ಲಿ ನಮಗಿಂತ ಮುಂದುವರೆದ ಬುದ್ಧಿವಂತ ಜೀವಸಂಕುಲವಿದೆಯೆಂದು ಅವರು ನಮ್ಮನ್ನು ಗಮನಿಸುತ್ತಿರುತ್ತಾರೆ ಎನ್ನುವುದರಿಂದ ಹಿಡಿದು ಮುಂದೊಂದು ದಿನ ಭೂಮಿ ನಾಶವಾದರೆ ನಾವು ಮಂಗಳನಲ್ಲಿಗೆ ಹೋಗಿ ನೆಲಸಬಹುದು ಎನ್ನುವುದರ ತನಕ ಊಹಾಪೋಹಗಳಿವೆ, ಕನಸುಗಳಿವೆ, ನಂಬಿಕೆಗಳಿವೆ.

ಇತ್ತೀಚಿಗಷ್ಟೇ ಮಂಗಳನ ಮೇಲೆ ಮಹಿಳೆಯನ್ನು 'ನೋಡಿದ್ದ' (!?) ಜನಸಾಮಾನ್ಯರಿಗೂ ಫೀನಿಕ್ಸ್ ಬಗ್ಗೆ ಕುತೂಹಲ ಸ್ವಲ್ಪ ಹೆಚ್ಚಾಗಿಯೇ ಇದ್ದದ್ದು ಸುಳ್ಳಲ್ಲ. ೧೯೬೫ರಲ್ಲಿ ಮ್ಯಾರಿನರ್–೪ ಉಪಗ್ರಹ ಮಂಗಳ ಗ್ರಹಕ್ಕೆ ಹೊಗುವ ತನಕ ಅಲ್ಲಿಯೂ ನದಿ ಸರೋವರಗಳಿವೆಯೆಂದೇ ಎಲ್ಲರೂ ನಂಬಿದ್ದರು. ಕಾಲ ಕಾಲಕ್ಕೆ ಬದಲಾಗುವ ಮಂಗಳನ ಮೇಲಿನ ಮಚ್ಚೆಗಳೂ ಅದನ್ನೇ ಸೂಚಿಸದ್ದವು. ಅದರಲ್ಲೂ ಧ್ರುವ ಪ್ರದೇಶದಲ್ಲಿ ಭೂಮಿಯ ಮೇಲಿರುವಂತೆ ಸಮುದ್ರ ಹಾಗೂ ವಿವಿಧ ಖಂಡಗಳಿವೆ ಎಂದು ತಜ್ಞರೂ ಸೇರಿದಂತೆ ಎಲ್ಲರೂ ಭಾವಿಸಿದ್ದರು. ಇನ್ನೂ ಕೆಲ ವಿಜ್ಞಾನಿಗಳು ಅದರ ಮೇಲೆ ಕಾಣುವ ಉದ್ದ ಕಪ್ಪ ಗೆರೆಗಳನ್ನು ನೀರಾವರಿ ಕಾಲುವೆಗಳೆಂದೂ ವಾದಿಸಿದ್ದರು. ಆದರೆ ಮುಂದಿನ ದಿನಗಳಲ್ಲಿ ವಿಜ್ಞಾನ ಮುಂದುವರಿದಂತೆಲ್ಲಾ ಅವು 'ದೃಷ್ಟಿಯ ಭ್ರಮೆ' ಎಂದು ಸಾಬೀತಾಯಿತು. ಆದರೆ ಇವತ್ತಿಗೂ ಸೂರ್ಯಮಂಡಲದಲ್ಲಿ ಭೂಮಿಯನ್ನು ಹೊರತುಪಡಿಸಿ

ನೀರಿರಬಹುದಾದ, ಜೀವಿಗಳಿದ್ದಾವು ಎಂದು ಆಶಿಸಬಹದಾದ ಏಕೈಕ ಗ್ರಹ ಮಂಗಳ. ಆದ್ದರಿಂದಲೇ ಮಂಗಳನತ್ತ ಎಲ್ಲರ ಚಿತ್ತ.

ಮಂಗಳ ಗ್ರಹದಲ್ಲಿ ನೀರಿನ ಮೂಲವಿದೆಯೇ ಎಂಬುದೇ ವಿಜ್ಞಾನಿಗಳ ಮುಂದಿರುವ ಮುಖ್ಯ ಪ್ರಶ್ನೆ. ನೀರಿದ್ದಲ್ಲಿ ಮಾತ್ರ ಜೀವಿಗಳಿರಲು ಸಾಧ್ಯ. ಆದ್ದರಿಂದ 'ನೀರನ್ನು ಹುಡುಕಿ' ಎಂಬ ವಾಕ್ಯವೇ ನಾಸಾದ ಮೂಲ ಮಂತ್ರ. ಈ ನಿಟ್ಟಿನಲ್ಲಿ ಮತ್ತೊಂದು ಪ್ರಯತ್ನವೇ ಫೀನಿಕ್ಸ್. ನಾಸಾದ ನಿರ್ದೇಶನದಲ್ಲಿ ನಡೆಯುತ್ತಿರುವ ಈ ಯೋಜನೆಯಲ್ಲಿ ಅರಿಜೋನ ವಿಶ್ವವಿದ್ಯಾನಿಲಯವೂ ಸೇರಿದಂತೆ ಹಲವು ಸಂಸ್ಥೆಗಳು ಭಾಗವಹಿಸಿವೆ. ಮಂಗಳನ ಮೇಲೆ ಹಿಂದೆಂದಾದರೂ ನೀರು ಹರಿದಿತ್ತೇ ಎಂಬ ಭೌಗೋಳಿಕ ಇತಿಹಾಸವನ್ನು ಪತ್ತೆ ಹಚ್ಚುವುದು ಹಾಗೂ ಅಲ್ಲಿನ ಹಿಮ ಹಾಗೂ ಧೂಳಿನ ಕಣಗಳ ಮಧ್ಯೆ ಯಾವುದಾದರೂ ಸೂಕ್ಷ್ಮಾಣು ಜೀವಿಸಿರಬಹುದೇ ಎಂದು ಶೋಧಿಸುವುದೇ ಇದರ ಮುಖ್ಯ ಗುರಿ. ಅದಕ್ಕೆ ಬೇಕಾಗುವ ಎಲ್ಲ ಸಾಮಾನು, ಸಲಕರಣೆಗಳೊಂದಿಗೆ ಸಜ್ಜಾಗಿಯೇ ಹೋಗಿದೆ ಫೀನಿಕ್ಸ್. ಅದರಲ್ಲಿನ ಮೈಕ್ರೋಸ್ಕೋಪಿಕ್ ಕ್ಯಾಮರಾಕ್ಕೆ ಮನುಷ್ಯನ ಕೂದಲನ್ನು ಸಾವಿರ ಸೀಳು ಮಾಡಿದರೂ ಕಾಣುವಷ್ಟು ಸಾಮರ್ಥ್ಯವಿದೆ. ಆದರೆ ಫೀನಿಕ್ಸ್ ಕೇಂದ್ರ ಬಿಂದುವಾಗಿರುವುದು ಅದರ ತೋಳು. ಮಂಗಳನ ಮೇಲ್ಮೈಯನ್ನು ಅಗೆದು ಅಲ್ಲಿರುವ ಮಣ್ಣು, ಹಿಮವನ್ನು ಪರೀಕ್ಷಿಸುವಲ್ಲಿ ಇದರದ್ದು ಬಹುಮುಖ್ಯ ಪಾತ್ರ. ಸುಮಾರು ಏಳೂವರೆ ಅಡಿ ಉದ್ದದ ಈ ತೋಳಿಗೆ ನಾಲ್ಕು ಕೀಲುಗಳಿವೆ ಹಾಗಾಗಿಯೇ ಇದು ಸುಲಭವಾಗಿ ನೂರಂಭತ್ತು ಡಿಗ್ರಿ ಕೋನದಲ್ಲಿಯೂ ತಿರುಗುತ್ತಾ, ಸರಿಯಾದ ಜಾಗವನ್ನು ಹುಡುಕಿ ನೆಲವನ್ನು ಅಗೆಯಬಲ್ಲದು. ಅಲ್ಲಿನ ಮಣ್ಣು ಮತ್ತು ಹಿಮವನ್ನು ಕೆರೆದು ನೋಡಿ, ಅದನ್ನು ಬೀಕರ್‌ಗೆ ಹಾಕಿ ಕುದಿಸಿ, ಪರೀಕ್ಷಿಸಿ ಫಲಿತಾಂಶವನ್ನು ಭೂಮಿಗೆ ಕಳುಹಿಸಿಕೊಡುವ ಚಾಣಾಕ್ಷ ಯಂತ್ರಗಳೂ ಇದರಲ್ಲಿವೆ.

ಇಷ್ಟೆಲ್ಲ ತಂತ್ರಜ್ಞಾನದ ನೆರವಿದ್ದೂ ಈ ಯೋಜನೆ ಸುಲಭದ ಕೆಲಸವಲ್ಲ. ಸಂಪೂರ್ಣವಾಗಿ ಗಣಕೀಕೃತವಾದ ಈ ಯೋಜನೆಯಲ್ಲಿ ಸ್ವಲ್ಪ ತಪ್ಪಾದರೂ ಅದರ ಉದ್ದೇಶವೇ ಹಾಳಾಗುತ್ತದೆ. ಅಲ್ಲಿ ಫೀನಿಕ್ಸ್ ಪ್ರತಿದಿನ ಏನು ಕೆಲಸ ಮಾಡಬೇಕು? ಯಾವ ಯಾವ ಯಂತ್ರಗಳು ಹೇಗೆ ವರ್ತಿಸಬೇಕು ಎಂಬುದನ್ನು ವಿಜ್ಞಾನಿಗಳು ಇಲ್ಲಿಂದಲೇ ನಿಯಂತ್ರಿಸುತ್ತಿರುತ್ತಾರೆ. ಉದಾಹರಣೆಗೆ ಫೀನಿಕ್ಸ್ ಅಲ್ಲಿಗೆ ಹೋದ ಮೊದಲನೇ ದಿನ ಕೇವಲ ಅಲ್ಲಿಯ ಉಷ್ಣಾಂಶ ಪರೀಕ್ಷಿಸುವ ಕೆಲಸ ನೀಡಲಾಯಿತು. ಎರಡನೆಯ ದಿನ ತನ್ನ ಯಾಂತ್ರೀಕೃತ ತೋಳನ್ನು ಹೊರಚಾಚಲು ಅಡ್ಡಯಿರುವ ಕಲ್ಲುಗಳನ್ನು ಸರಿಸಿಕೊಳ್ಳುವಂತೆ ಸೂಚಿಸಲಾಯಿತು. ಮೂರನೇ ದಿನದಿಂದಷ್ಟೇ ಅದರ ನಿಜವಾದ ಕೆಲಸ ಪ್ರಾರಂಭವಾಯಿತು.

ನಾಸಾದ ವಿಜ್ಞಾನಿಗಳ ತಂಡ ಆ ದಿನದ ಪರಿಸ್ಥಿತಿಯನ್ನು ಗಮನಿಸಿ, ಅನಂತರ ತಮ್ಮ ಉದ್ದೇಶಕ್ಕೆ ತಕ್ಕಂತೆ ಫೀನಿಕ್ಸ್‌ಗೆ ಕೆಲಸವನ್ನು ವಹಿಸುತ್ತಾರೆ. ಅದಕ್ಕಾಗಿಯೇ ಅಭಿವೃದ್ಧಿ ಪಡಿಸಿದ 'ಸಿ ಕೋಡ್' ಎಂಬ ವಿಶೇಷ ಸಾಫ್ಟ್‌ವೇರ್ ಅನ್ನು ಬಳಸಿ ಪ್ರತಿದಿನ ಹೊಸ ಕೆಲಸವನ್ನು ಇಲ್ಲಿಂದಲೇ 'ಪ್ರೋಗ್ರಾಮ್' ಮಾಡುತ್ತಾರೆ. ಅದು ಮಂಗಳನ ಸುತ್ತ ಸುತ್ತುತ್ತಿರುವ ಎರಡು ಬೇರೆ ಕೃತಕ ಉಪಗ್ರಹಗಳ ಮೂಲಕ ಫೀನಿಕ್ಸ್‌ಗೆ ರವಾನೆಯಾಗುತ್ತದೆ. ಇಷ್ಟೆಲ್ಲ

ಪ್ರಕ್ರಿಯೆಗಳು ನಡೆಯಲು ಕೇವಲ ಇಪ್ಪತ್ತು ನಿಮಿಷ ಸಾಕು. ಅನಂತರ ಹನ್ನೆರಡರಿಂದ ಹದಿನಾಲ್ಕು ಗಂಟೆಗಳ ಬಳಿಕ ಅದು ತಾನು ಮಾಡಿದ ಕೆಲಸದ ಫಲಿತಾಂಶವೇನಾಯಿತು ಎಂಬುದರ ಮಾಹಿತಿ ಕಳುಹಿಸುತ್ತದೆ. ಈಗಾಗಲೇ ಅದು ಮಂಗಳನ ಮೇಲ್ಮೈನ ಫೋಟೋಗಳನ್ನು, ಅಲ್ಲಿನ ವಾತಾವರಣದ ವಿವರಗಳನ್ನು ಕಳುಹಿಸಿಕೊಟ್ಟಿದೆ. ನೆಲವನ್ನು ಅಗೆದು ಮಣ್ಣನ್ನು ಸಂಗ್ರಹಿಸುತ್ತಿದೆ.

ಆಗಸ್ಟ್ ೪, ೨೦೦೭ರಲ್ಲಿ ಭೂಮಿಯಿಂದ ಹೊರಟ ಫೀನಿಕ್ಸ್ ಮಂಗಳನ ಅಂಗಳ ಮುಟ್ಟಲು ತೆಗೆದುಕೊಂಡಿದ್ದು ಸುಮಾರು ಹತ್ತು ತಿಂಗಳುಗಳು. ೬೮ ಕೋಟಿ ಕಿ.ಮೀ ದೂರದ ಮಂಗಳನತ್ತ ಸಾಗಲು ಫೀನಿಕ್ಸ್ ಗಂಟೆಗೆ ೨೧ ಸಾವಿರ ಕಿ.ಮೀ ವೇಗದಲ್ಲಿ ಓಡಿತು. ಆದರೆ ಮಂಗಳನ ಕಕ್ಷೆಗೆ ತಾಕುವ ಅತ್ಯಂತ ಅಪಾಯಕಾರಿ ಘಳಿಗೆ 'ಆತಂಕದ ಏಳು ನಿಮಿಷ'ಗಳನ್ನು ಬಹು ಚಾಣಾಕ್ಷತೆಯಿಂದ ನಿಭಾಯಿಸಿಕೊಂಡಿತು. ನೆಲಕ್ಕೆ ತಾಗುವಾಗ ಗಂಟೆಗೆ ೮ ಕಿ.ಮೀಗೆ ತನ್ನ ವೇಗವನ್ನು ಇಳಿಸಿಕೊಂಡಿದ್ದೇ ಅದು ಸುರಕ್ಷಿತವಾಗಿ ಅಲ್ಲಿ ಕಾಲೂರಲು ಸಾಧ್ಯವಾದದ್ದು. ವಿಜ್ಞಾನಿಗಳು ಊಹಿಸಿದ್ದಕ್ಕಿಂತ ೧೫ ನಿಮಿಷ ಮುಂಚಿತವಾಗಿಯೇ ತನ್ನ ಗುರಿ ತಲುಪಿದ ಫೀನಿಕ್ಸ್, ಐದೇ ನಿಮಿಷಗಳಲ್ಲಿ ಅಲ್ಲಿಂದ ಸಂದೇಶ ಕಳಿಸಲಾರಂಭಿಸಿತು.

ಮಂಗಳ ಗ್ರಹ ಭೌಗೋಳಿಕವಾಗಿ ಸತ್ತಿದೆ. ಅಲ್ಲಿ ಈಗ ಜ್ವಾಲಾಮುಖಿಗಳೂ ಕಾರ್ಯನಿರ್ವಹಿಸುತ್ತಿಲ್ಲ. ಇಡೀ ಸೌರಮಂಡಲದಲ್ಲೇ ಅತ್ಯಂತ ಎತ್ತರದ ಪರ್ವತ ಎಂದು ಗುರುತಿಸಲ್ಪಟ್ಟಿರುವ ಮೌಂಟ್ ಒಲಂಪಸ್‌ನ (ಇದು ಮೌಂಟ್ ಎವರೆಸ್ಟ್‌ಗಿಂತ ಮೂರು ಪಟ್ಟು ದೊಡ್ಡದು) ಜ್ವಾಲಾಮುಖಿಯ ಬಾಯಿಯೂ ಮುಚ್ಚಿಹೋಗಿದೆ. ಆದರೆ ಫೀನಿಕ್ಸ್ ಸ್ಪರ್ಶಿಸಿದ ಪ್ರದೇಶ ಅದರ ಉದ್ದೇಶಕ್ಕೆ ಅತ್ಯಂತ ಪ್ರಶಸ್ತವಾದ ಸ್ಥಳ. ಹಿಂದೆಂದೋ ನೀರು ಹರಿದಿರಬಹುದಾದ ಸ್ಥಳ ಎಂದು ಗುರುತಿಸಲ್ಪಟ್ಟ ಮಂಗಳನ ಉತ್ತರ ಧ್ರುವದಲ್ಲಿ ಅದೀಗ ಬೀಡುಬಿಟ್ಟಿರುವುದು. ಆದ್ದರಿಂದಲೇ ಆ ಸ್ಥಳಕ್ಕೆ 'ಗ್ರೀನ್ ವ್ಯಾಲಿ' ಎಂದು ಹೆಸರಿಡಲಾಗಿದೆ.

ಇಷ್ಟೆಲ್ಲ ಸಾಹಸ ಮಾಡಿ ಮಂಗಳನ ಮಡಿಲಿಗೆ ಹಾರಿದ ಫೀನಿಕ್ಸ್‌ನ ಆಯುಷ್ಯ ಇರುವುದು ಕೇವಲ ಮೂರು ತಿಂಗಳು ಮಾತ್ರ. ಪೌರಾಣಿಕ ಫೀನಿಕ್ಸ್ ಪಕ್ಷಿಯಂತೆ ಇದರ ಸಾವು ಬೆಂಕಿಯಿಂದಾಗದೆ ಹಿಮದಿಂದಾಗುತ್ತದೆ. ಛಳಿಗಾಲ ಪ್ರಾರಂಭವಾಗುತ್ತಿದ್ದಂತೆ ವಾತಾವರಣದ ಉಷ್ಣತೆ ಕಡಿಮೆಯಾಗುತ್ತಾ ಸುತ್ತೆಲ್ಲ ಹಿಮ ಆವರಿಸಿ ಫೀನಿಕ್ಸ್ ಕೆಲಸ ಮಾಡದಂತೆ ತಡೆಯುತ್ತದೆ. ನಿಧಾನವಾಗಿ ಅದನ್ನು ಮುಚ್ಚಿಹಾಕುತ್ತದೆ. ಆದರೆ ಹಾಗೆ ಹಿಮ ಆವರಿಸುವ ಕೊನೆಯ ಕ್ಷಣದ ವರೆಗಿನ ಚಿತ್ರಗಳನ್ನು ಭೂಮಿಗೆ ಕಳುಹಿಸುವ ವ್ಯವಸ್ಥೆ ಅದರಲ್ಲಿದೆ. ಮಂಗಳವನ್ನು ಈಗಾಗಲೇ ಮಾರ್ಸ್ ಒಡಿಸ್ಸೀ, ಮಾರ್ಸ್ ಎಕ್ಸ್‌ಪ್ರೆಸ್, ಮಾರ್ಸ್ ರಿಕನಾಯಿಸನ್ಸ್ ಎಂಬ ಮೂರು ಕೃತಕ ಉಪಗ್ರಹಗಳು ಸುತ್ತುತ್ತಿವೆ. (ಭೂಮಿಯನ್ನು ಬಿಟ್ಟರೆ ಮಂಗಳಕ್ಕೆ ಇಷ್ಟೊಂದು ಕೃತಕ ಉಪಗ್ರಹಗಳನ್ನು ಕಾಯಲು ನೇವಿಸಿರುವುದು) ಅಲ್ಲದೆ ಅದರ ಭೂ ಭಾಗವನ್ನು ಅನ್ವೇಷಿಸಲು ಸ್ಪಿರಿಟ್ ಮತ್ತು ಆಪರ್ಚುನಿಟಿ ಎಂಬ ಗಗನನೌಕೆಗಳು ಮಂಗಳದ ತುಂಬೆಲ್ಲ ಓಡಾಡುತ್ತಿವೆ. ಇದೀಗ ಫೀನಿಕ್ಸ್ ಸಹ ಅಲ್ಲಿಯೆ ತಳವೂರಿದೆ. ಈ ಎಲ್ಲ ಕೃತಕ ಉಪಗ್ರಹಗಳು, ಗಗನನೌಕೆಗಳು ಕಳುಹಿಸಿಕೊಟ್ಟ ಮಾಹಿತಿಗಳಲ್ಲಿ ಎಲ್ಲಿಯೂ ಇಲ್ಲಿ ಜೀವಿಗಳು ಇದ್ದ, ಇರುವ ಬಗ್ಗೆ ಸುಳಿವುಗಳಿಲ್ಲ. ಆದರೆ ಅವು ಅಲ್ಲಿ

ಹಿಂದೆಂದೋ ನೀರು ಹರಿದಿತ್ತು ಎಂಬುದರ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತವೆ. ಜೊತೆಗೆ ಅಲ್ಲಿನ ಭೌಗೋಳಿಕ ಮೇಲ್ಮೈ ಸಹ ನದಿಯ ನೀರು ಹರಿದಂತಿದೆ. ಇದೇ ವಿಜ್ಞಾನಿಗಳಲ್ಲಿ ಅಲ್ಲಿ ಜೀವಿಗಳಿದ್ದವು, ಈಗಲೂ ಇದ್ದಾವು ಎನ್ನುವ ಆಶಾವಾದವನ್ನು ಬಿಗಿಹಿಡಿದಿದೆ.

ಇತ್ತೀಚಿಗಿನ ಸಂಶೋಧನೆಯೊಂದು ಹಿಂದೆ ಅಲ್ಲಿ ಹರಿದಿದ್ದ ನೀರು ಅತೀ ಹೆಚ್ಚಿನ ಲವಣಾಂಶವನ್ನು ಹೊಂದಿದ್ದು (ಕ್ಷಾರ) ಅದು ಜೀವಿಗಳು ಬದುಕಲು ಸಾಧ್ಯವಿಲ್ಲದ ಮಟ್ಟದಲ್ಲಿತ್ತು ಎಂದು ಹೇಳುತ್ತದೆ. ಶುದ್ಧ ನೀರಿನಲ್ಲಿ ಜೀವಿಗಳು ಬದುಕುವ ಪ್ರಮಾಣ ೧.೦ ಇರುತ್ತದೆ. ಸಮುದ್ರದ ನೀರಿನಲ್ಲಿ ಅದು ೦.೯೮ ಪ್ರಮಾಣದಲ್ಲಿರುತ್ತದೆ. ಆದರೆ ಮಂಗಳನ ಮೇಲೆ ಹರಿದಿರುವ ನೀರಿನಲ್ಲಿ ಇದರ ಪ್ರಮಾಣ ಕೇವಲ ೦.೭೮ ರಿಂದ ೦.೮೫ ರ ಮಧ್ಯದಲ್ಲಿದೆ. ಈಗ ಭೂಮಿಯ ಮೇಲಿರುವ ಯಾವ ಜೀವಿಯೂ ಆ ನೀರಿನಲ್ಲಿ ವಾಸವಾಗಿರಲು ಸಾಧ್ಯವಿಲ್ಲ. ಆದ್ದರಿಂದ ಮಂಗಳನ ನೆಲ ಈಗಲೂ, ಹಿಂದೆಯೂ ಬಂಜೆಯೇ ಎಂದು ಅಭಿಪ್ರಾಯಪಟ್ಟಿದೆ.

ಅಲ್ಲಿನ ವಾತಾವರಣದಲ್ಲಿ ಶೇ.೯೫ ರಷ್ಟು ಇಂಗಾಲದ ಡೈ ಆಕ್ಸೈಡ್, ಶೇ.೩ ರಷ್ಟು ನೈಟ್ರೋಜನ್ ಇದ್ದು, ಜೊತೆಗೆ ತೇವಾಂಶ ಹಾಗೂ ಆಮ್ಲಜನಕ ಇರುವ ಗುರುತುಗಳೂ ಇವೆ. ಇಲ್ಲಿ ದ್ರವ ರೂಪದ ನೀರು ಇದುವರೆಗೂ ಕಂಡುಬಂದಿಲ್ಲ. ಅಲ್ಲಿನ ಧ್ರುವ ಪ್ರದೇಶಗಳು ಹಿಮಾವೃತವಾಗಿವೆ. ಆದರೆ ಇವೆಲ್ಲ ಕೇವಲ ನೀರಿನ ಪಸೆಯಿಲ್ಲದ ಇಂಗಾಲದ ಡೈ ಆಕ್ಸೈಡ್ ಹೊಂದಿರುವ ಹಿಮದ ಬಂಡೆಗಳು. ಇವೆಲ್ಲ, ಅಲ್ಲಿ ಯಾವುದೇ ಸೂಕ್ಷ್ಮಾಣು ಸಹ ಬದುಕಿರಲು ಸಾಧ್ಯವಿಲ್ಲ ಎಂಬ ಅಂಶದತ್ತಲೇ ಬೊಟ್ಟುಮಾಡಿ ತೋರಿಸುತ್ತಿವೆ.

ಆದರೆ ನಾವು ಇದುವರೆಗೂ ಹಾಕಿದ ಲೆಕ್ಕಾಚಾರವೆಲ್ಲ ಭೂಮಿಯ ಮೇಲಿನ ವಾತಾವರಣ, ಇಲ್ಲಿ ಜೀವಿಗಳು ಬೆಳೆದುಬಂದ ಬಗೆಯನ್ನು ಅವಲಂಬಿಸಿದ್ದು. ಆದರೆ ಮಂಗಳನ ಮೇಲೆ ಆ ವಾತಾವರಣ ಅಲ್ಲಿನ ಹವಾಮಾನ ವೈಚಿತ್ರ್ಯಕ್ಕೆ ತಕ್ಕಂತೆಯೇ ಜೀವಿಯ ಉಗಮವಾಗಿದ್ದರೆ? ಈ ಪ್ರಶ್ನೆಯೇ ಅಲ್ಲಿ ಮತ್ತೆ ಮತ್ತೆ ಜೀವಿಗಳನ್ನು ಹುಡುಕುವಂತೆ ಮಾಡುತ್ತಿದೆ. *(ಸಾಭಾರ : ವಿಜಯ ಕರ್ನಾಟಕ)*

* * *

ಸಂತಾಪ

ತಮ್ಮ ಸ್ವಂತ ಪರಿಶ್ರಮ, ಜ್ಞಾನ, ಪ್ರಾಮಾಣಿಕತೆ, ನಿಷ್ಠೆ ಮುಂತಾದ ದೈವೀಗುಣಗಳ ಬಲದಿಂದ ಹೊಳೆನರಸೀಪುರದಂಥ ಪುಟ್ಟ ಗ್ರಾಮದಲ್ಲಿ ಜನಿಸಿ ದೂರದ ದಿಲ್ಲಿಯಲ್ಲಿ ಮೂರು ಪ್ರಭಾವೀ ಪ್ರಧಾನ ಮಂತ್ರಿಗಳಿಗೆ ೨೦ ವರ್ಷಗಳ ಕಾಲ ಮಾಧ್ಯಮ ಸಲಹಾಗಾರರಾಗಿ, ಕನ್ನಡ ಸಾಹಿತ್ಯ ಸೇವಕರಾಗಿ ಕಾಯಕವೆಸಗಿ ೨೦೦೮ ಸೆಪ್ಟಂಬರ್ ೨ ನೇ ತಾರೀಖು ತೀರಿಕೊಂಡ ಹೆಚ್.ವೈ.ಶಾರದಾಪ್ರಸಾದರ ನಿಧನಕ್ಕೆ ಜನಪದ ವಿಚಾರ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ವೇದದಲ್ಲಿಯ ಮುತ್ತುಗಳು

– *ವಿನೋಬಾ*

[ವೇದದ ಯಾವ ಮಹತ್ವದ ಮಂತ್ರಗಳನ್ನು ವಿನೋಬಾರವರು ಸಾಮಾನ್ಯವಾಗಿ ಆಗಾಗ್ಗೆ ಹೇಳುತ್ತಿದ್ದರೊ ಅವುಗಳನ್ನು ಇಲ್ಲಿ ಸಂಕಲನ ಮಾಡಲಾಗಿದೆ. ಕಾಣಿಸಲಾದ ಅಂಕಿಗಳು ಋಗ್ವೇದದ ಸಾರದ್ದಾಗಿವೆ.]

ಪರಾ ಹಿ ಮೇ

ಭಗವಾನ್ ಸೂರ್ಯನಾರಾಯಣನು ಪ್ರಾತಃಕಾಲದಲ್ಲಿ ಉದಯಿಸುತ್ತಾನೆ. ಆಗ ತನ್ನ ರಶ್ಮಿಗಳನ್ನು ವ್ಯಾಪಕಗೊಳಿಸುತ್ತಾನೆ. ಆ ರಶ್ಮಿಗಳನ್ನು ತ್ರಿವಿಧವಾಗಿ ಊಹ, ವ್ಯೂಹ ಮಾಡುತ್ತಾನೆ. ಅನೇಕ ಪ್ರಕಾರದ ಶಕ್ತಿಗಳುಳ್ಳ ಅನೇಕ ಕಿರಣಗಳನ್ನು ಪಸರಿಸುತ್ತಾನೆ. ಸಂಜೆಗೆ ತನ್ನೀ ಎಲ್ಲ ಕಿರಣಗಳನ್ನು ತನ್ನಲ್ಲಿಯೇ ಸಂಕಲಿತಮಾಡಿಕೊಳ್ಳುತ್ತಾನೆ. ಈ ವ್ಯೂಹ ಮತ್ತು ಸಮೂಹದ ಕಲ್ಪನೆಯಲ್ಲಿ ಪ್ರಪಂಚದ ಆಧ್ಯಾತ್ಮಿಕ ಅನುಭವಗಳನ್ನು ಅತ್ಯಂತ ಸುಂದರವಾಗಿ ಪ್ರಸ್ತಾಪಿಸಲಾಗಿದೆ. ಈ ಎರಡೂ ಪ್ರಯೋಗಗಳು ಸೇರಿ ಆಧ್ಯಾತ್ಮಿಕ ಜೀವನವಾಗುತ್ತದೆ. ಇದರ ಆಧಾರದ ಮೇಲೆ ಎರಡು ಬಾರಿ, ಉಷಃಕಾಲದಲ್ಲಿ ಒಂದು ಕಾರ್ಯ, ಸಂಧ್ಯಾಕಾಲದಲ್ಲಿ ಎರಡನೇ ಕಾರ್ಯವಾಗುತ್ತದೆ. ಉಷಃಕಾಲದಲ್ಲಿ ಕಿರಣಗಳು ಹರಡುತ್ತವೆ. ಸಂಧ್ಯಾಕಾಲದಲ್ಲಿ ಅವುಗಳ ಸಂಗ್ರಹವಾಗುತ್ತದೆ. ಈ ಎರಡೂ ತತ್ವಗಳನ್ನು ನಿರಂತರವಾಗಿ ಧ್ಯಾನಮಾಡಿದಾಗ ಪೂರ್ಣಧ್ಯಾನವಾಗುತ್ತದೆ. ಈ ಉಪಾಸನೆಯ ಭಾಷೆಯಲ್ಲಿ ಇದನ್ನೇ ಅವಾಹನ ಮತ್ತು ವಿಸರ್ಜನಾ ಎನ್ನುತ್ತಾರೆ. ಇದರ ಬಹು ಸುಂದರ ವರ್ಣನೆ ವೇದದಲ್ಲಿ ಬಂದಿದೆ.

ಪರಾ ಹಿ ಮೆ ವಿಮನ್ಯವಃ ಪತಂತಿ ವಸ್ಯ ಇಷ್ಟ್ಯ ವಯೋನ ವಸತೀ ರೂಪ (೧.೬.೪)

ಸಂಜೆಯ ಸಮಯದಲ್ಲಿ ನನ್ನ ಮಾನಸಿಕ ವೃತ್ತಿಗಳೆಲ್ಲ ಹಿಂದಿರುಗುತ್ತಲಿವೆ ಮತ್ತು ನನ್ನಲ್ಲಿ ಲೀನವಾಗುತ್ತಿವೆ ಎಂದು ಋಷಿ ಹೇಳುತ್ತಾನೆ. ಎಲ್ಲ ವಸ್ತುಗಳಲ್ಲಿ ಶ್ರೇಷ್ಠ ವಸ್ತು ಪರಮಾತ್ಮ, ಅಂತರ್ಯಾಮಿ. ಅದರಲ್ಲಿ ವಾಸಿಸುವುದಕ್ಕಾಗಿ ನನ್ನ ಎಲ್ಲ ವೃತ್ತಿಗಳು ಹಿಂದಕ್ಕೆ ಓಡಿಬರುತ್ತಿವೆ, ಪಕ್ಷಿಗಳು ಸಂಜೆ ಹೊತ್ತಿನಲ್ಲಿ ಗೂಡಿಗೆ ಓಡಿ ಬರುವಂತೆ. ಪಕ್ಷಿಗಳು ಇಡೀ ದಿನದ ಕೆಲಸದ ನಂತರ ದಣಿದು ಬಿಡುತ್ತವೆ ಆಮೇಲೆ ಕೊನೆಯಲ್ಲಿ ತಮ್ಮ ವಿಶ್ರಾಂತಿ ಸ್ಥಾನದ ಕಡೆಗೆ ಹೋಗುತ್ತವೆ. ಅಂತಯೇ ಎಲ್ಲ ಜೀವಿಗಳು ದಿನವಿಡೀ ಚಿಂತನ ಮತ್ತು ಕರ್ಮದಿಂದ ದಣಿದುಬಿಡುತ್ತವೆ. ನಿದ್ರೆಯಲ್ಲಿ ಪರಮಾತ್ಮನ ಬಳಿ ಬಹಳಷ್ಟು ಸಮೀಪ ಹೊಗುತ್ತವೆ. ಪುನಃ ಅಲ್ಲಿ ಶಕ್ತಿಯನ್ನು ಪಡೆದು ಹಿಂದಿರುಗುತ್ತವೆ.

ಪುನಃ ಎರಡನೇ ಮಂತ್ರ ಬರುತ್ತದೆ. ಅದರಲ್ಲಿ ಋಷಿ ಮೊದಲಿಗಿಂತ ವಿರುದ್ಧವಾದ ಉಪಮೆಯನ್ನು ಕೊಡುತ್ತಾನೆ.

ಪರಾ ಮೆ ಯಂತಿ ಧೀತಯಃ ಗಾವೋ ನ ಗವ್ಯ ತೀರನು. ಇಚ್ಛಂತಿ ರೂರುಚಕ್ಷಸಂ (೧.೯.೧೬)

ನನ್ನ ಇಡೀ ಧಿತಿಯಾಂ ಅಂದರೆ ಧ್ಯಾನವೃತ್ತಿಗಳೆಲ್ಲವೂ ಪ್ರಾರ್ಥನೆಗಾಗಿ, ದರ್ಶನಕ್ಕಾಗಿ ಹೊರಗೆ ಹೋಗುತ್ತಿವೆ. ಯಾವ ರೀತಿ ಹಸುಗಳು ಅಕ್ಕಪಕ್ಕದ ಹುಲ್ಲುಗಾವಲುಗಳ ಕಡೆಗೆ ಭಿನ್ನ ಭಿನ್ನ ದಿಕ್ಕುಗಳಲ್ಲಿ ಓಡಿಹೋಗುತ್ತವೋ ಹಾಗೆ ನನ್ನ ವೃತ್ತಿಗಳು ಓಡಿಹೋಗುತ್ತಿವೆ.

ಎರಡೂ ಮಂತ್ರಗಳು ಒಂದೇ ಸೂಕ್ತದಲ್ಲಿ ಋಗ್ವೇದದ ಪ್ರಥಮ ಮಂಡಲದಲ್ಲಿ ಬಂದಿವೆ. ಎರಡೂ ಸೇರಿ ಒಂದು ಪೂರ್ಣ ಮಂತ್ರವಾಗುತ್ತದೆ.

ನಾವು ನಮ್ಮ ವೃತ್ತಿಗಳನ್ನು ಬೆಳಿಗ್ಗೆ ಹರಡುತ್ತೇವೆ ಮತ್ತು ಸಂಜೆ ಎಳೆದುಕೊಳ್ಳುತ್ತೇವೆ. ಬೆಳಗಾಯಿತು, ಈಗ ನಾನು ಹೊರಗೆ ಹೋಗಬೇಕು, ಸೇವೆ ಮಾಡಬೇಕೆಂದು ಮನಸ್ಸು ಹೇಳುತ್ತದೆ. ಸೂರ್ಯನ ಕಿರಣಗಳು ಹೊರಗಡೆಗೆ ಹರಡಿವೆ. ಪಕ್ಷಿಗಳು ಗೂಡುಗಳಿಂದ ಹೊರ ಹೊರಡುತ್ತವೆ, ಪ್ರವಾಸಿಗಳು ಯಾತ್ರೆಗಾಗಿ ಹೊರಡುತ್ತಾರೆ. ಯಾವ ಪ್ರಕಾಶ ಲೀನವಾಗಿತ್ತೋ ಅದು ವಿಶ್ವದಲ್ಲಿ ಪ್ರಜ್ವಲಿತಗೊಳ್ಳುತ್ತಿದೆ. ಅದು ಭಗವಂತನ ರೂಪವಲ್ಲದೆ ಮತ್ತಿನ್ನೇನು? ಆದ್ದರಿಂದ ಬೆಳಗಿನ ಹೊತ್ತು ಹೊರಗೆ ಹೋಗಬೇಕು, ಸೇವೆ ಮಾಡಬೇಕು, ಮನಸ್ಸು ಕೆಲಸದಲ್ಲಿ ತೊಡಗುವುದು. ನಂತರ ಸಂಜೆಯ, ರಾತ್ರಿ ಸಮಯ ಬರುತ್ತದೆ ಆಗ ಮನಸ್ಸನ್ನು ಒಳಗೆ ತೆಗೆದುಕೊಳ್ಳಬೇಕು ಈ ರೀತಿ ಮನುಷ್ಯನಿಗೆ ಏಕಾಗ್ರತೆ ಮತ್ತು ಅನೇಕಾಗ್ರತೆಗಳ ಅಗತ್ಯವುಂಟಾಗುತ್ತದೆ, ಒಂದು ಸಂದರ್ಭದಲ್ಲಿ ಇದರ, ಮತ್ತೊಂದು ಸಂದರ್ಭದಲ್ಲಿ ಅದರ ಅಗತ್ಯವುಂಟಾಗುತ್ತದೆ. ಆದ್ದರಿಂದ ಮನುಷ್ಯನು ವ್ಯೂಹ ಮತ್ತು ಸಮೂಹ ಈ ಎರಡನ್ನೂ ಉಪಯೋಗಿಸಿಕೊಳ್ಳಬೇಕಾಗುತ್ತದೆ.

ವಿಶ್ವಂ ಪುಷ್ಟಂ

ಆದಿವಾಸಿಗಳು ಸಂಸ್ಕಾರ ಹೀನರೆಂದು ಹೇಳಲಾಗುತ್ತದೆ. ಆದರೆ ಸಂಗತಿ ಏನೆಂದರೆ ಅವರೇ ಹಿಂದೂಸ್ತಾನದ ಮೂಲ ಸಂಸ್ಕಾರ. ಇಂದಿನ ಆದಿವಾಸಿಗಳ ಭಾಷೆಗಳಲ್ಲಿ ಗೀತೆ, ಬೈಬಲ್, ಖುರಾನ್ ಮುಂತಾದ ಪುಸ್ತಕಳಿಲ್ಲವೆಂಬುದೇನೋ ನಿಜ ಆದರೆ ಅವರ ಪುಸ್ತಕ ಪ್ರಾಚೀನ ಆದಿವಾಸಿಗಳ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಜಗತ್ತಿನಲ್ಲಿ ಯಾವ ಗ್ರಂಥವನ್ನು ಮೊದಲಿಗೆ ಬರೆಯಲಾಯಿತೋ ಅದರ ಹೆಸರು ಋಗ್ವೇದ. ಇದು ಆದಿವಾಸಿಗಳ ಗ್ರಂಥ. ಆದಿವಾಸಿಗಳ ಸಂಸ್ಕಾರ, ಭಾವನೆ, ಉಪಾಸನೆ, ಜೀವನ ಪದ್ಧತಿ ಈ ಎಲ್ಲವೂ ಋಗ್ವೇದದಲ್ಲಿ ತುಂಬಾ ಒಳ್ಳೆಯ ರೀತಿಯಲ್ಲಿ ನೋಡಲು ಸಿಗುತ್ತವೆ. ಕಾಡನ್ನು ಕಡಿದು ಆದಿವಾಸಿಗಳು ಯಾವುದನ್ನು ನಿವಾಸವನ್ನಾಗಿ ಮಾಡಿಕೊಂಡರೊ ಅದನ್ನು ಗ್ರಾಮವೆಂದು ಕರೆದುಕೊಂಡರು. ಈಗ ಯಾವ ರೀತಿ ರಾಷ್ಟ್ರಧರ್ಮ ವಿಶ್ವಧರ್ಮದ ಮಾತು ಪ್ರಪಂಚದಲ್ಲಿವೆಯೊ ಅದೇ ರೀತಿ ಆದಿವಾಸಿಗಳದು ಗ್ರಾಮಧರ್ಮವಿತ್ತು. ಗ್ರಾಮಧರ್ಮದಲ್ಲಿಯೆ ವಿಶ್ವಧರ್ಮವೂ ಸೇರಿಕೊಂಡಿದೆ ಎಂದು ಭಾವಿಸಿ ಆದಿವಾಸಿಗಳು ಭಗವಂತನನ್ನು ಕುರಿತು ವಿಶ್ವಂ ಪುಷ್ಟಂ ಗ್ರಾಮೆ ಅಸ್ಮಿನ್ ಅನಾತುರಂ-ಅಂದರೆ ನಮ್ಮ

ಗ್ರಾಮದಲ್ಲಿ ಆರೋಗ್ಯಪೂರ್ಣವಾದ, ಪರಿಪುಷ್ಟವಾದ ವಿಶ್ವದ ದರ್ಶನವಾಗಲಿ ಎಂದು ಪ್ರಾರ್ಥನೆ ಮಾಡುತ್ತಿದ್ದರು. ಇದು ಲೌಕಿಕ ಸಂಸ್ಕೃತವಲ್ಲ, ವೈದಿಕ ಸಂಸ್ಕೃತವೂ ಅಲ್ಲ. ಇದು ಪುರಾತನವಾದ ಆದಿವಾಸಿ ಭಾಷೆಯಾಗಿದೆ. ಗ್ರಾಮದಲ್ಲಿ ವಿಶ್ವದ ಮಾತನ್ನು ಹೇಳಲಾಗಿದೆ. ಅಂದರೆ ಗ್ರಾಮವು ಆಕಾರದಲ್ಲಿ ಚಿಕ್ಕದಾದರೂ ಕೂಡ ಪ್ರಕಾರದಲ್ಲಿ ದೊಡ್ಡದಾಗಿರಬೇಕು. ಅದರಲ್ಲಿ ವಿಶ್ವ ಸೇರಿರಬೇಕು. ವಾಸ್ತವದಲ್ಲಿ ಗ್ರಾಮಧರ್ಮ ಮತ್ತು ವಿಶ್ವಧರ್ಮದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಗ್ರಾಮಧರ್ಮದ ಅರ್ಥ ಗ್ರಾಮದಲ್ಲಿಯ ಜನರು ಒಂದು ಪರಿವಾರವೆಂದು ತಿಳಿದು ಇರಬೇಕು. ವಿಶ್ವಧರ್ಮದ ಅರ್ಥ ಭಿನ್ನ ಭಿನ್ನ ಸ್ಥಾನಗಳಲ್ಲಿ ಹಾಗೂ ದೇಶಗಳಲ್ಲಿರುವ ಜನರು ಪರಸ್ಪರ ಒಳ್ಳೆಯದನ್ನು ಬಯಸಬೇಕು ಮತ್ತು ಯಾರ ವಿರೋಧವಾಗಿಯೂ ಕೆಲಸ ಮಾಡಕೂಡದು. ಈ ಎರಡೂ ಧರ್ಮಗಳು ಒಂದೇ ಆಗಿವೆ. ಒಂದು ಪುಟ್ಟ ಇಟ್ಟಿಗೆಯ ಮೇಲೆ ನಿಂತಿದ್ದರೆ, ಇನ್ನೊಂದು ವಿಶಾಲವಾದ ಪಾಯದ ಮೇಲೆ ನಿಂತಿದೆ. ವಿಷ್ಣುವಿನ ಚಿಕ್ಕ ಮೂರ್ತಿ ಮತ್ತು ದೊಡ್ಡ ಮೂರ್ತಿ ವಿಷ್ಣುವೇ ಆಗಿರುತ್ತಾನೆ. ಇದೇ ಪ್ರಕಾರ ಗ್ರಾಮಧರ್ಮ ಮತ್ತು ವಿಶ್ವಧರ್ಮಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಋಷಿ ಒಂದು ಕಡೆ ವಿಶ್ವದೊಂದಿಗೆ ಸಂಬಂಧವನ್ನು ಜೋಡಿಸುತ್ತಾ ಇನ್ನೊಂದು ಕಡೆ ಗ್ರಾಮ ನಿಷ್ಠೆಯ ಉಪದೇಶ ಮಾಡುತ್ತಾನೆ. ವೇದವು ಜಗತ್ತಿನ ಪ್ರಥಮ ಗ್ರಂಥವಾಗಿದ್ದರೂ ಕೂಡ ಹಿಂದಿನ ಕಾಲದಲ್ಲಿ ಋಷಿಗಳು ಚಿಂತನೆ ಮಾಡುವಾಗ ದ್ರಷ್ಟ ಆಗಿಬಿಡುತ್ತಿದ್ದರು. ಗ್ರಾಮನಿಷ್ಠೆ ಮತ್ತು ವಿಶ್ವಪ್ರೇಮದ ಮಧ್ಯೆ ಯಾರನ್ನೂ ಬರಗೊಡುತ್ತಿರಲಿಲ್ಲ.

ವಿದೇಶದ ಆಡಳಿತದಿಂದ ಮುಕ್ತವಾಗುವುದಕ್ಕಾಗಿ ಹೇಗೆ ಸ್ವದೇಶಿ ಧರ್ಮದ ಆಚರಣೆಯನ್ನು ಮಾಡಲಾಯಿತೊ ಹಾಗೆಯೇ ಹೊರಗಿನ ಅಧಿಕಾರ ಗ್ರಾಮಗಳ ಮೇಲೆ ನಡೆಯದಿರುವುದಕ್ಕಾಗಿ ಸ್ವಗ್ರಾಮ ಧರ್ಮವನ್ನು ನಡೆಸಬೇಕಾಗುವುದು. ಅದನ್ನೆ ವೇದ ಭಗವಾನರು ಗ್ರಾಮಧರ್ಮವೆಂಬ ಹೆಸರಿನಿಂದ ಕರೆದರು. ಇಡಿ ಗ್ರಾಮದಲ್ಲಿ ಪುಷ್ಟಿ ಮತ್ತು ಆರೋಗ್ಯ ಇರಲಿ ಎಂಬುದು ವೇದದ ಭಾಷೆ ಪುಷ್ಟಿಯಲ್ಲಿ ಉತ್ಪಾದನೆ, ಉದ್ಯೋಗ ಇತ್ಯಾದಿ ಎಲ್ಲವೂ ಬರುತ್ತವೆ. ಪುಷ್ಟಿ ಕೇವಲ ಶಾರೀರಿಕವಲ್ಲ, ಬೌದ್ಧಿಕ ಮತ್ತು ಮಾನಸಿಕ ಅರ್ಥದಲ್ಲಿ ಕೂಡ ಇರಬೇಕು. ಯಾವ ಭಗವಂತನನ್ನು ಕುರಿತು ಅವರು ಪ್ರಾರ್ಥನೆ ಮಾಡಿದರೊ ಆ ಬಗವಂತನಿಗೆ ಪುರಂದರ ಎಂದು ಹೆಸರಿಟ್ಟರು. ಅಂದರೆ ನಗರಗಳನ್ನು ಉರುಳಿಸುವವನು. ಪ್ರಕೃತಿಯೊಂದಿಗಿನ ಯಾರ ಸಂಬಂಧ ಮುರಿಯಿತೊ ಅವನದು ಜೀವನದೊಂದಿಗೂ ಸಂಬಂಧ ಮುರಿದಂತೆ ಕೂಡ. ಆದ್ದರಿಂದ ಪುರ–ವಿದಾರಣಾದ ಮಾತಿನಿಂದ ನಗರವಾಸಿಗಳಿಗೆ ಸುಖವೇ ಆಗುವುದಿದೆ. ಈ ರೀತಿಯಾಗಿ ಎರಡು ಪ್ರಕಾರದ ವೈದಿಕ ಸಾಧನೆ ಮಾಡಬೇಕಿದೆ. ಪುರ–ವಿದಾರಣಾ ಕಾರ್ಯ ಮತ್ತು ಗ್ರಾಮಪುಷ್ಟಿ ಕಾರ್ಯ. ಆಗ ಗ್ರಾಮೀಣ ಜೀವನ ಆಕರ್ಷಕವಾಗುವುದು.

ಅನು : ಸುಕೌ

* * *

ಜನಪದ ಧ್ವನಿ

ಪ್ರಜಾಪ್ರಭುತ್ವ ಇಂದು ಮತ್ತು ನಾಳೆ

ಭಾರತ ಇಡೀ ವಿಶ್ವದಲ್ಲೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ. ಇಲ್ಲಿರುವಷ್ಟು ವೈವಿಧ್ಯತೆಯನ್ನು ಬೇರೆಲ್ಲೂ ಕಾಣಲಾರೆವು. ಎಲ್ಲ ಧರ್ಮಗಳ ಸಮನ್ವಯವನ್ನೂ ಸಾಧಿಸಿರುವ ಈ ದೇಶ ಕಳೆದ ಅರವತ್ತು ವರ್ಷಗಳಿಂದ ಸಹನೆ ಪೋಷಣಾ ಶಕ್ತಿಯನ್ನು ಮೈಗೂಡಿಸಿಕೊಂಡು ಮುಂದುವರೆಯುತ್ತಾ ಬಂದಿರುವುದು ವಿಶ್ವಕ್ಕೆ ಮಾದರಿಯಾಗಿದೆ. ಭಾರತೀಯರ ಅನನ್ಯತೆಯನ್ನು ವಿಶ್ವದ ಎಲ್ಲ ರಾಷ್ಟ್ರಗಳೂ ಅರ್ಥಮಾಡಿಕೊಂಡಿವೆ.

ಭಾರತ ಪ್ರಗತಿಪರ ರಾಷ್ಟ್ರ. ಇಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಅಸಾಧಾರಣ ರೀತಿಯಲ್ಲಿ ಪ್ರಗತಿಕಾಣುತ್ತಿದೆ. ಆಹಾರ ಸ್ವಾವಲಂಬನೆ, ಆರೋಗ್ಯ ಸ್ವಾಲಂಬನೆಗಳನ್ನು ಸಾಧಿಸುತ್ತಾ ಬಂದಿದೆ. ಕ್ಷಯ, ಶಿಶುಗಳ ಪ್ರಾಣಹಾನಿ, ಸಾಂಕ್ರಾಮಿಕ ರೋಗಗಳು ಮೊದಲಾದವುಗಳ ವಿರುದ್ಧ ಈ ದೇಶ ಹೋರಾಡಿ ಇಂದು ಜನರು ಹೆಚ್ಚು ವರ್ಷಗಳ ಕಾಲ ಬದುಕುವ ಸಾಧ್ಯತೆ ಉಂಟಾಗಿದೆ. ಬಡತನ ಇಲ್ಲಿ ಹೆಚ್ಚು ನಿಜ. ಆದರೆ ಬಡತನದ ರೇಖೆಗಿಂತ ಕೆಳಗಿರುವವರ ಸಂಖ್ಯೆ ಕಳೆದ ಇಪ್ಪತ್ತು ವರ್ಷಗಳಲ್ಲಿ ಶೇ.೪೪.೫ ರಿಂದ ಶೇ.೨೫ ಕ್ಕೆ ಇಳಿದಿರುವುದು ಗಮನಾರ್ಹ. ಭಾರತ ಇಂದು ೨೮ ರಾಜ್ಯಗಳ ರಾಷ್ಟ್ರ. ಈ ಹಿಂದೆ ಪಂಜಾಬ್, ತಮಿಳುನಾಡು ಮತ್ತು ಅಸ್ಸಾಂ ರಾಜ್ಯಗಳು ಪ್ರತ್ಯೇಕತಾವಾದ ಮಂಡಿಸಿದ್ದರೂ ಇಂದು ಪ್ರಜಾಪ್ರಭುತ್ವದ ವೈಶಿಷ್ಟ್ಯತೆಯನ್ನು ಅರ್ಥಮಾಡಿಕೊಂಡು ಆ ವಾದದಿಂದ ಹಿಂದೆ ಸರಿದಿವೆ. ಹೀಗಾಗಿ ಒಂದು. ನಾವೆಲ್ಲ ಭಾರತೀಯರು ಒಂದೇ ಎಂಬ ಏಕತಾ ಭಾವ ಚೆನ್ನಾಗಿ ಮೂಡಿದೆ.

ಇಷ್ಟೆಲ್ಲ ಇದ್ದರೂ ಪ್ರಜಾಪ್ರಭುತ್ವದ ಭವಿಷ್ಯದಲ್ಲಿಯೂ ಕುಂದದ ಸ್ಥಿತಿಗೆ ಬರದಂತಾಗಲು ರಾಜಕೀಯದಲ್ಲಿ ಕೆಲಸಮಾಡುತ್ತಿರುವವರು ದೇಶದ ಏಕತೆಗಾಗಿ ಅಪಾರ ಶ್ರಮಿಸಬೇಕಾಗುತ್ತದೆ. ಇಂದು ಭಾರತದ ಜನಸಂಖ್ಯೆ ಹೆಚ್ಚಿದೆ. ಎಲ್ಲರಿಗೂ ನೀರು, ಆಹಾರ, ವಿದ್ಯುತ್, ವಸತಿ ಮೊದಲಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ಅಸ್ಪೃಶ್ಯತೆ, ಹಿಂದೂ-ಮುಸ್ಲಿಂ ಸಾಮರಸ್ಯವಿಲ್ಲದಿರುವ ಸ್ಥಿತಿ, ಅಧಿಕಾರಿಶಾಹಿ ಮನೋಭಾವ ಇವೆಲ್ಲ ಮರೆಯಾಗಬೇಕು. ಈ ದಿನಗಳಲ್ಲಿ ಮೂರನೆಯ ಎರಡರಷ್ಟು ಅಧಿಕಾರಶಾಹಿ ಪ್ರವೃತ್ತಿ ಕಂಡುಬರುತ್ತಿದೆ. ರಾಜಕೀಯದಲ್ಲಿ ಹಿರಿಯಸ್ಥಾನದಲ್ಲಿರುವವರು ಅಧೀನ ಅಧಿಕಾರಿಗಳಿಗೆ ಕಾರ್ಯಗಳನ್ನು ಹಂಚುವ ಪ್ರವೃತ್ತಿ ಬೆಳಸಿಕೊಳ್ಳಬೇಕಾಗಿದೆ. ಬಹಳಷ್ಟು ಅಧಿಕಾರಗಳನ್ನು ತಾನೊಬ್ಬನೇ ನಿರ್ವಹಿಸುತ್ತೇನೆ ಎಂದರೆ ಅದು ಪ್ರಗತಿಗೆ ಅಡ್ಡಿಯಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳದ್ದೇ ಅಧಿಕಾರ ಪ್ರಜೆಗಳು ಮತ ಚಲಾಯಿಸಿ ಅಧಿಕಾರ ತಂದುಕೊಡುತ್ತಾರೆ ಈ ಅಧಿಕಾರವನ್ನು ಒತ್ತಾಯದಿಂದ ಕೊಂಡುಕೊಳ್ಳುವ ಸ್ಥಿತಿ ನಿರ್ಮಾಣವಾಗಬಾರದಷ್ಟೆ ಹಾಗಾದಲ್ಲಿ ಪ್ರಜಾಪ್ರಭುತ್ವಕ್ಕೆ ಮಾರಕವಾಗುತ್ತದೆ. ಭ್ರಷ್ಟಾಚಾರ, ಭಯೋತ್ಪಾದನೆ ಇವೆಲ್ಲ ನಿರ್ನಾಮವೂ ಆಗಬೇಕು.

ನಮ್ಮ ದೇಶ ಸಹಿಷ್ಣುತಾರಾಷ್ಟ್ರ ವಿಶ್ವಶಾಂತಿ ಬಯಸುವ ರಾಷ್ಟ್ರ ಪ್ರಜಾಪ್ರಭುತ್ವವನ್ನು ದೃಢಪಡಿಸಿಕೊಂಡು ಬಂದಿರುವ ಈ ದೇಶ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ಕೊಟ್ಟಿರುವಂತೆ ಮೂಲಭುತ ಕರ್ತವ್ಯಗಳನ್ನೂ ಸೂಚಿಸಿದೆ. ಆದುದರಿಂದ ಪ್ರಜೆಗಳು ಹಕ್ಕುಗಳನ್ನು ಒತ್ತಾಯಿಸುವ ಮೊದಲು ತಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ಮಾಡಿದ್ದೇವೆಯೇ ಎಂದೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಕರ್ತವ್ಯನಿಷ್ಠೆ ಇದ್ದಲ್ಲಿ ಹಕ್ಕುಗಳು ತಾವಾಗಿಯೇ ಲಭ್ಯವಾಗುತ್ತವೆ. ಅಧಿಕಾರಿಗಳಾಗಲಿ, ಅಧಿಕಾರವಿಲ್ಲದವರಾಗಲಿ ದೇಶಕ್ಕೆ ನಿಷ್ಠರಾಗಿ ನಡೆದುಕೊಂಡು ಪ್ರಜಾಪ್ರಭುತ್ವವನ್ನು ಉಳಿಸಿ ಬೆಳೆಸುವುದೇ ಇರುವ ಮುಂದಿನ ಹಾದಿ.

– ಪ್ರೋ. ಬಿ.ಕೆ. ಚಂದ್ರಶೇಖರ್

ಆರೋಗ್ಯ ಮತ್ತು ಜನ್ಮದಿನ : ಗಾಂಧೀ ಮತ್ತು ಟಾಗೋರರ ವಿಚಾರ

– ಗುರುದಯಾಳ್ ಮಲ್ಲಿಕ್

ಆರೋಗ್ಯ ನಿಜವಾಗಿಯೂ ಒಂದು ಭಾಗ್ಯ. ಆದರೆ ಅನೇಕ ಸಲ ಅದನ್ನು ತಿಳಿಯುವುದು ನಾವು ಜ್ವರದಿಂದ ಹಾಸಿಗೆ ಹಿಡಿದಾಗ. ಸಾಮಾನ್ಯವಾಗಿ ನಾವು ಆರೋಗ್ಯದ ಕಡೆಗೆ ಸಾಕಷ್ಟು ಗಮನ ಕೊಡುವುದಿಲ್ಲ. ಇದಕ್ಕೆ ಕಾರಣ ದೇಹವೆಂಬುದು ನಮ್ಮ ವಿಶಿಷ್ಟ ಕನಸನ್ನೊ ಅಥವಾ ಜೀವನದ ಉದ್ದೇಶವನ್ನೊ ಈಡೇರಿಸುವ ಸಾಧನವೆಂಬುದನ್ನೂ ಹಾಗೂ ಅದಕ್ಕಾಗಿ ದೇಹವನ್ನು ಸದಾ ಲವಲವಿಕೆಯಿಂದ ಇಡಬೇಕೆಂಬುದನ್ನೂ ಮರೆತಿರುವುದು. ಸೌಂದರ್ಯದ ಒಳನೋಟವಿದ್ದರೂ ಅದನ್ನು ಕಾಗದದ ಮೇಲೆ ಚಿತ್ರಿಸಲು ಒಳ್ಳೆಯ ಬ್ರಷ್ ಇಲ್ಲದಿದ್ದರೆ ಅದರಿಂದ ಏನು ಪ್ರಯೋಜನ? ಆದ್ದರಿಂದ ಯಾರು ಮಾನವ ಜೀವನವು ಒಂದು ಕೊಡುಗೆಯೆಂದೂ, ಅದನ್ನು ಯೋಗ್ಯವಾಗಿ ಉಪಯೋಗಿಸಬೇಕೆಂದೂ ಮತ್ತು ಸೂಕ್ಷ್ಮ ಮನಸ್ಸಿನ ಭಾವನೆಗಳನ್ನು ಸ್ವೀಕರಿಸುವುದಕ್ಕಾಗಿ ಅದನ್ನು ಸುಸ್ಥಿತಿಯಲ್ಲಿ ಇಡಬೇಕೆಂದೂ ತಿಳಿದಿರುತ್ತಾರೋ, ಅವರು ಆರೋಗ್ಯಕರ ದೇಹದ ಮಹತ್ವವನ್ನು ಅರಿತವರಾಗಿರುತ್ತಾರೆ. ಆದ್ದರಿಂದ ಗಾಂಧೀಜಿ ಮತ್ತು ಟಾಗೋರ್ ದೇಹದ ಸ್ವಭಾವಸಿದ್ಧ ಆಹಾರದ ಅಗತ್ಯಗಳ ಬಗ್ಗೆ ಯಾವಾಗಲೂ ಗಮನ ಕೊಡುತ್ತಿದ್ದರು. ಸೂಕ್ತ ಆಹಾರವನ್ನು ಸೇವಿಸುತ್ತಿದ್ದರು. ಇದು ರುಚಿಗೆ ಸಂಬಂಧಿಸಿರದೆ ಪೌಷ್ಠಿಕತೆಗೆ ಸಂಬಂಧಿಸಿದ್ದಾಗಿರುತ್ತಿತ್ತು. ಆಹಾರ ಸೇವನೆಯ ಶಾಸ್ತ್ರದಲ್ಲಿ ಅವರು ಅನೇಕ ಪ್ರಯೋಗಗಳನ್ನು ಮಾಡಿದ್ದರು.

ಪೌಷ್ಟಿಕ ಆಹಾರದ ತರುವಾಯ ನಿಗದಿತ ಅವಧಿಯ ವಿಶ್ರಾಂತಿ, ಮನೋರಂಜನೆ ಮತ್ತು ವಿಶ್ರಾಮ. ಸೇವಾ ಭಾವನೆಯ ಮೂಲ ಬಲದಿಂದಲೆ ಜೀವಿಸುತ್ತಿದ್ದ ಗಾಂಧೀಜಿ ಮತ್ತು ಟಾಗೋರ್‌ರಂಥವರಿಗೆ ಈ ವಿಷಯದಲ್ಲಿ ಕಟ್ಟುನಿಟ್ಟಿನ ನಿಯಮ ಹಾಕಲು ಸಾಧ್ಯವಿಲ್ಲ. ಸೇವಾ ಮನೋಭಾವನೆ ವ್ಯಕ್ತಿಗೆ ವಿಶೇಷ ದೈಹಿಕ ಶಕ್ತಿಯನ್ನೂ ಧಾರಢ್ಯವನ್ನೂ ತಂದು ಕೊಡುತ್ತದೆ. ಸಂಕ್ಷಿಪ್ತವಾಗಿ ಅವರು ಹೇಳುವಂತೆ ವೈದ್ಯರಲ್ಲಿ ಅತ್ಯುತ್ತಮ ವೈದ್ಯರು ಆಹಾರ ಸೇವನಾ ವಿಧಾನ ಮತ್ತು ಶಾಂತಿ. ಈ ಇಬ್ಬರು ವೈದ್ಯರ ಸೂಚನೆಗಳನ್ನು ಉದಾಸೀನ ಮಾಡಿದಾಗ ಅಥವಾ ಉಲ್ಲಂಘಿಸಿದಾಗ ಗಾಂಧೀಜಿ ಸಾಮಾನ್ಯವಾಗಿ ಪ್ರಕೃತಿ ಚಿಕಿತ್ಸೆಯನ್ನು ಅಳವಡಿಸಿಕೊಂಡರೆ ಟಾಗೋರ್ ಹೋಮಿಯೋಪತಿ ಪದ್ಧತಿಯನ್ನು ಅಳವಡಿಸಿಕೊಳ್ಳುತ್ತಿದ್ದರು. ಆರೋಗ್ಯಕ್ಕೆ ಸಹಕಾರಿಯಾಗುವ ಈ ಉಪಚಾರಗಳನ್ನಲ್ಲದೆ ಅವರಿಬ್ಬರೂ ಇನ್ನೆರಡು ವಿಧಾನಗಳನ್ನು ಉಪಯೋಗಿಸುತ್ತಿದ್ದರು. ಅವು ಹಾಸ್ಯಪ್ರಜ್ಞೆ ಮತ್ತು ಪ್ರಾರ್ಥನೆ. ಇದರ ಒಟ್ಟು ಪರಿಣಾಮ ಅವರು ಹಗಲಿರುಳು ಎನ್ನದೆ ಶ್ರಮಿಸುತ್ತಿದ್ದುದರಲ್ಲಿ ಶಾಂತಿ ಭಾವನೆ ಉಂಟಾಗುತ್ತಿತ್ತು. ಈ ಶಾಂತಿ ಪೂರ್ಣತೆ ಆರೋಗ್ಯವಲ್ಲದೆ ಮತ್ತೇನೂ ಅಲ್ಲ.

ದೊಡ್ಡ ಗುರು ಹೇಳಿರುವಂತೆ ಆರೋಗ್ಯವೆಂಬುದು ಪವಿತ್ರ. ಆಗ ಕಾರ್ಯಬಾಹುಳ್ಯ ಎಷ್ಟೇ ಬೃಹತ್ ಮತ್ತು ಶ್ರಮದಾಯಕವಾಗಿದ್ದರೂ ಪ್ರತಿಯೊಂದು ಕ್ರಿಯೆಯೂ ಆ ಪರಿಪೂರ್ಣ ಪರಮಪವಿತ್ರನ ಪೂಜೆಯೇ ಆಗಿರುತ್ತದೆ. ಆ ಕಾರ್ಯ ಎಂದೂ ಕನಿಷ್ಠವೆಂದಾಗಲೀ ಬೇಸರವೆಂದಾಗಲೀ ಅನಿಸುವುದಿಲ್ಲ. ಕಾಯಕವೇ ಕೈಲಾಸವೆಂದು ಭಾವಿಸಿದವನಿಗೆ ಕೆಲಸವೇ ಪುಷ್ಟಿಯಾಗುತ್ತದೆ. ಆದ್ದರಿಂದಲೇ ಗಾಂಧೀಜಿ ಮತ್ತು ಟಾಗೋರರು ಸುಮಾರು ಅರವತ್ತು ವರ್ಷಗಳ ಕಾಲ ಬೆಳಗಿನಿಂದ ಸಂಜೆಯವರೆಗೂ ಕ್ರಿಯಾಶೀಲರಾಗಿದ್ದರು. ಅವರಿಗೆ

ಕಾಯಕವೆಂದರೆ ಪೂಜೆ, ಪೂಜೆಯೆಂದರೆ ಕಾಯಕವಾಗಿತ್ತು.

ಜನ್ಮದಿನ

ಸಾಮಾನ್ಯವಾಗಿ ಪ್ರತಿಯೊಂದು ದೇಶದಲ್ಲಿ ಪ್ರತಿವರ್ಷವೂ ಮಹಾಪುರುಷರ ಜನ್ಮದಿನವನ್ನು ಬಹು ಉತ್ಸಾಹ ಮತ್ತು ವೈಭವದಿಂದ ಆಚರಿಸಲಾಗುತ್ತದೆ. ಆ ದಿನವನ್ನು ಹಬ್ಬವೆಂದೇ ಭಾವಿಸಲಾಗುತ್ತದೆ. ಮಹಾತ್ಮರು ಜೀವನದ ಬಗ್ಗೆ ಇರಬೇಕಾದ ಒಂದು ದೃಷ್ಟಿಯನ್ನೊ, ಮೌಲ್ಯವನ್ನೊ ಪ್ರತಿನಿಧಿಸುತ್ತಾರೆ. ಅವರ ಜೀವನ ಸನಾತನವಾದ ಸತ್ಯವನ್ನೂ ಮತ್ತು ದೇವರು ಕೊಟ್ಟ ತುಂಬಾ ಶ್ರೇಷ್ಠವಾದ ಮಾನವ ದೇಹದ ಬಗ್ಗೆಯೂ ತಿಳಿಸುತ್ತದೆ. ಗಾಂಧೀಜಿ ತಮ್ಮನ್ನು ದರಿದ್ರನಾರಾಯಣನೊಂದಿಗೆ ಗುರುತಿಸಿಕೊಂಡಿದ್ದರೆ, ಟಾಗೋರ್ ಸುಂದರನಾರಾಯಣನೊಂದಿಗೆ ಗುರುತಿಸಿಕೊಂಡಿದ್ದರು.

ಜನ್ಮದಿನದ ಸಂತೋಷವನ್ನು ಆ ಮಹಾಪುರುಷರ ಗುಣಗಾನ ಮಾಡುವುದರಲ್ಲಿ, ಭೋಜನಕೂಟ ಏರ್ಪಡಿಸುವುದರಲ್ಲಿ, ಪತ್ರಿಕೆಗಳಲ್ಲಿ ಹೆಗ್ಗಳಿಕೆಯ ಲೇಖನಗಳನ್ನು ಬರೆಯುವುದರಲ್ಲಿ ಜನ ತೃಪ್ತಿ ಪಡೆಯುತ್ತಾರೆ. ಅಂಥ ಆಚರಣೆಯಲ್ಲಿ ಅವರು ತೊಡಗಿದಾಗ ಆ ಮಹಾಪುರುಷ ಯಾವ ಮಹಾನ್ ಉದ್ದೇಶಕ್ಕಾಗಿ ಬದುಕಿದ್ದನೋ, ಆ ಉದ್ದೇಶಕ್ಕೆ ತಮ್ಮನ್ನು ಅರ್ಪಿಸಿಕೊಳ್ಳಬೇಕೆಂಬ ವಿಷಯವನ್ನೇ ಮರೆಯುತ್ತಾರೆ. ಆದ್ದರಿಂದ ಗಾಂಧೀಜಿಯವರ ಜನ್ಮದಿನದಂದು ಯಾರಾದರೂ ಬಡವರ ಸೇವೆಯಂಥ ಪವಿತ್ರ ಕೆಲಸ ಮಾಡಿದರೆ, ಟಾಗೋರರ ಜನ್ಮದಿನದಂದು ಕಲಾಕ್ಷೇತ್ರದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ ಏನನ್ನಾದರೂ ಸುಂದರ ಕೃತಿಯನ್ನು ರಚಿಸಿದರೆ ಅಂಥ ಶುಭ ಹಾರೈಕೆಗಳು ಅವರಿಗೆ ಕೂಡಲೆ ಮತ್ತು ಸಂತೋಷವಾಗಿ ಸ್ವೀಕಾರಾರ್ಹವಾಗುತ್ತಿದ್ದವು.

ಯಾವ ಸತ್ಯವನ್ನು ಗಾಂಧೀಜಿ ಮತ್ತು ಟಾಗೋರ್ ಹಿಂಬಾಲಿಸುತ್ತಿದ್ದರೋ ಅದು ಅವರಿಗಿಂತ ಹಿರಿದಾಗಿತ್ತು. ಆದರೆ ಜನರು ಇದಕ್ಕೆ ವ್ಯತಿರಿಕ್ತವಾಗಿ ಆಲೋಚಿಸುತ್ತಾರೆ. ಕರ್ತನಿಗಿಂತ ಕೃತಿ ದೊಡ್ಡದೆಂಬುದನ್ನು ಮರೆತು ಅದಕ್ಕನುಗುಣವಾಗಿ ನಡೆದುಕೊಳ್ಳುತ್ತಾರೆ. ಜನ ಬರುತ್ತಾರೆ, ಹೋಗುತ್ತಾರೆ. ಆದರೆ ಜಗತ್ ಕಲ್ಯಾಣದ ಕಾರ್ಯ, ದೇವರ ಆ ಕಾರ್ಯ ನಿರಂತರವಾಗಿ ಸಾಗುತ್ತಾ ಹೋಗುತ್ತದೆ.

ಒಮ್ಮೆ ಟಾಗೋರರು ಓರ್ವ ಯುವಕನಿಗೆ ಅವನ ಜನ್ಮದಿನದ ಸಂದೇಶದಲ್ಲಿ ಹೀಗೆ ಬರೆದರು, "ನಿನ್ನ ಜನ್ಮದಿನವು ನಿನಗೆ ಅನಂತತೆಯ ಸ್ಪರ್ಶ ಮಾಡಿಸಲಿ. ಏಕೆಂದರೆ ಮಾನವ ಇತಿಹಾಸದಲ್ಲಿ ಗಾಂಧೀ ಮತ್ತು ಟಾಗೋರರಂಥ ಮಹಾನ್ ವ್ಯಕ್ತಿಗಳ ಜನ್ಮಗಳ ಸರಣಿಯೇ ಆದ ನಂತರವೂ ಜನ್ಮದಿನಗಳೋತ್ಸವದ ನಿರರ್ಥಕತೆಯನ್ನೂ, ಪೂರ್ಣತೆ ಮತ್ತು ಆತ್ಮಸಾಕ್ಷಾತ್ಕಾರದ ಸತ್ಯತೆಯ ಕಡೆಗಿನ ನಮ್ಮ ಹೆಜ್ಜೆ ಎರೆಹುಳುವಿನ ಚಲನೆಯಷ್ಟು ನಿಧಾನವಾಗಿರುವುದನ್ನೂ ಕಡೆಗಣಿಸುತ್ತೇವೆ. ಮಾನವ ಜೀವನವು ಅತ್ಯಮೂಲ್ಯವಾದ ರತ್ನವೆಂಬ ಸರಳ ಸತ್ಯವನ್ನು ನೆನೆಪಿನಲ್ಲಿಟ್ಟುಕೊಂಡು ಜೀವನವನ್ನು ಅದರಂತೆ ನೋಡಿಕೊಂಡರೆ ಪ್ರತಿವರ್ಷ ನಮ್ಮ ಜನ್ಮದಿನ ಬಂದಾಗ ಸತ್ಯಂ, ಶಿವಂ, ಸುಂದರಂ ಎಂಬೀ ಮೂರು ಶಾಶ್ವತತೆಗಳಲ್ಲಿಯ ಸ್ವಲ್ಪ ಅಂಶವನ್ನಾದರೂ ಗ್ರಹಿಸಿಕೊಳ್ಳಲು ನಿಶ್ಚಯಿಸುವೆವು. ಸಾಧನೆಯ ದಾರಿಯಲ್ಲಿಯ ಏಕಾಗ್ರತೆಯನ್ನು ವಿಚಲಗೊಳಿಸುವ ಅಪಾಯಗಳೆಷ್ಟೇ ಇದ್ದಾಗಿಯೂ ಅದನ್ನು ಸಾಮರ್ಥ್ಯಕ್ಕೆ ಅನುಸಾರವಾಗಿ ಅದರ ಸಿದ್ಧಿಗಾಗಿ ಪ್ರಯತ್ನಿಸು".

– *ಅನು : ಸುಕೌ*

* * *

ವಿಶಿಷ್ಟ ಕೃಷಿಕ – ಸತ್ಯಕಾಮ

– ಕೆ.ಆರ್. ಮೋಹನ್

ಸ್ವಾತಂತ್ರ್ಯ ಹೋರಾಟಗಾರ, ಪತ್ರಕೋದ್ಯಮಿ, ಸಾಹಿತ್ಯಿಕ ಪರಿವ್ರಾಜಕ ಸತ್ಯಕಾಮರು ಬಹು ಪ್ರತಿಭಾ ಸಂಪನ್ನರು. ತಾವು ಮಾಡಿದ ಹಲವಾರು ಸಾಧನೆಗಳ ನಿಜಸಂಗತಿಗಳನ್ನು ಹೇಳದಿರುವುದೇ ಅವರ ವೈಶಿಷ್ಟ್ಯ. ಅಕ್ಟೋಬರ್ ೨೦ ಕ್ಕೆ ಅವರು ಕಾಲವಾಗಿ ಹತ್ತು ವರ್ಷವಾಗುತ್ತದೆ. ಇಲ್ಲಿ ಅವರ ಸ್ಮರಣಾರ್ಥವಾಗಿ, ಕೃಷಿಯಲ್ಲಿ ಅವರು ಮಾಡಿದ ಸಾಧನೆಯ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ.

ಇವತ್ತು ಜಮಖಂಡಿಯಿಂದ ೧೫ ಕಿ.ಮೀ ದೂರದಲ್ಲಿ ಹಾಗೂ ಕಲ್ಲಹಳ್ಳಿಯಿಂದ ೨ ಕಿ.ಮೀ ದೂರದಲ್ಲಿರುವ ಸತ್ಯಕಾಮರ ತೋಟ ನೋಡಿದರೆ ಒಂದು ಸುಂದರ ನಂದನವನವಾಗಿ ಕಾಣುತ್ತದೆ. ಒತ್ತಾಗಿರುವ ಗದ್ದೆಗಳು; ಫಲಪುಷ್ಪ ಭರಿತ ಗಿಡಮರಗಳು; ಬಗೆಬಗೆಯ ವೃಕ್ಷಗಳಿಂದ ತುಂಬಿದ ಪ್ರದೇಶವು ಬಹುರಮ್ಯವಾಗಿದೆ. ಅನತಿ ದೂರದಲ್ಲಿ ಶಾಂತಿ ಸಾಗರ ಕೆರೆ ಇದೆ. ನವಿಲು, ಕೋಗಿಲೆ ಇತ್ಯಾದಿ ಪಕ್ಷಿಗಳು ಸ್ವಚ್ಛಂದವಾಗಿ ವಿಹರಿಸುತ್ತವೆ. ದೂರದಲ್ಲಿ ಕಲ್ಲಹಳ್ಳಿ ವೆಂಕಟರಮಣನ ಗುಡಿ ಮತ್ತು ಬೆಟ್ಟಗಳ ಸಾಲು ಕಾಣುತ್ತವೆ. ಎಲ್ಲೆಲ್ಲೂ ಹಚ್ಚ ಹಸಿರು ಪ್ರಶಾಂತ ವಾತಾವರಣ. ನಿರ್ಜನವಾಗಿರುವ ಋಷ್ಯಾಶ್ರಮಕ್ಕೆ ಬಂದ ಅನುಭವವಾಗುತ್ತದೆ. ನೆಮ್ಮದಿ ಆಯಾಚಿತವಾಗಿ ಬರುತ್ತದೆ. ಇವೆಲ್ಲ ಸುಮಾರು ಐದು ದಶಕಗಳ ಅಪಾರ ಪರಿಶ್ರಮ ಮತ್ತು ಬೆವರು ಸುರಿಸಿದ ಫಲವೆಂದು ತಿಳಿಸಿ ಹೇಳಿದ ಮೇಲೆ ಗೊತ್ತಾಗುತ್ತದೆ.

ಸ್ವಾತಂತ್ರ್ಯ ಯೋಧನೆಂದು ಸರ್ಕಾರ ಕೊಡಮಾಡಿದ ನಾಲ್ಕು ಎಕರೆ ಬರಡು ಗುಡ್ಡಗಾಡು ಪ್ರದೇಶದಲ್ಲಿ ೧೯೬೨ ರಲ್ಲಿ ಒಕ್ಕಲುತನ ಪ್ರಾರಂಭಿಸಿದರು. ಒತ್ತಾಸೆಯಾಗಿ ಅವರ ಬಾಲ್ಯ ಸ್ನೇಹಿತ ಗುರುರಾಜ ಹಬ್ಬು ಮತ್ತು ಅವರ ಪತ್ನಿ ಪದ್ಮಾವತಿ ಸೋಲಾಪುರದಿಂದ ಬಂದು ಸೇರಿಕೊಂಡರು. ಇರಲು ಮನೆಯಿಲ್ಲ, ಕೂಲಿಗೆ ಕೊಡಲು ಹಣವಿಲ್ಲ. ಸತ್ಯಕಾಮರೇ ಒಂದೆಡೆ ಹೇಳುವಂತೆ "ಕಲ್ಲಹಳ್ಳಿಗೆ ಬಂದಾಗ ನಮ್ಮ ಹತ್ತಿರ ಏನೂ ಇರಲಿಲ್ಲ. ಕೆಲವು ದಿನ ಮರದ ಆಶ್ರಯದಲ್ಲಿ ದಿನಕಳೆದೆವು. ಮೂರು ಜನ ಸೇರಿ ಬಾವಿ ತೋಡಲು ಶುರುಮಾಡಿದೆವು. ದಿನವಿಡೀ ಅಗೆದರೂ ನಮ್ಮ ಪರಿಶ್ರಮ ಸಾಕಾಗಲಿಲ್ಲ. ಯಾಕೆಂದರೆ ನಾವಿಬ್ಬರೂ ಬಲಾಢ್ಯರಲ್ಲ. ಕೂಲಿಕೊಡಲು ನಮ್ಮ ಹತ್ತಿರ ಹಣವಿಲ್ಲ. ನಾನು ಅಗೆಯುವ ಬದಲು ಏನನ್ನಾದರೂ ಬರೆದು ಸಂಪಾದಿಸಿ ಕೃಷಿ ಕೆಲಸಕ್ಕೆ ಯಾಕೆ ವಿನಿಯೋಗಿಸಬಾರದು ಎಂದು ಯೋಚನೆ ಬಂದು, ಕಾರ್ಯಗತ ಮಾಡಿದೆ. ನನ್ನ ಮೊದಲನೇ ಕಾದಂಬರಿ 'ತಣ್ಣಗಿನ ಬೆಂಕಿ' ಆಗ ಸುಧಾ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದು ಬಹಳ ಜನಪ್ರಿಯವಾಯಿತು. ಒಳ್ಳೆಯ ಸಂಭಾವನೆ ಸಿಕ್ಕಿತು. ಅನಂತರ 'ಕಪಿಲವಸ್ತು' ದಿನಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂತು. ಹೀಗೆ ನನ್ನ ಬರವಣಿಗೆಯು ಕೃಷಿ ಮೂಲಕ ಷುರುವಾಯಿತು." ಮುಂದೆ 'ತರಂಗ' ಪತ್ರಿಕೆಯಲ್ಲೂ ಸತ್ಯಕಾಮರ ಅನೇಕ ಕಾದಂಬರಿಗಳು ಪ್ರಕಟವಾದವು.

ಬಾವಿಯಲ್ಲಿ ನೀರು ಬಂದ ಮೇಲೆ ಸಮಾಧಾನ ಮತ್ತು ಚಾಲನೆ ಹಂತ ಹಂತವಾಗಿ ಬೆಳವಣಿಗೆ. ಅರವತ್ತರ ದಶಕದ ಕೊನೆಯಲ್ಲಿ ಹಸಿರುಕ್ರಾಂತಿ ಪ್ರಾರಂಭವಾದಾಗ, ಅದರ ಪೂರ್ಣ ಪ್ರಯೋಜನ ಪಡೆದುಕೊಂಡರು. ತೋಟದ ಕೆಲವು ಭಾಗಗಳನ್ನು ಹೈಬ್ರಿಡ್ ಬೀಜ ಉತ್ಪಾದನೆಗೆ ಉಪಯೋಗಿಸಿದರು. ಇವರ ತೋಟದ ಬೀಜದ ಗುಣಮಟ್ಟ ಜಿಲ್ಲೆಗೇ ಉತ್ತಮವಾಗಿದ್ದು, ವಿಜ್ಞಾನಿಗಳಿಂದ ಪ್ರಶಂಸೆ ಪಡೆಯಿತು. ಇವರ ಮಾದರಿ ತೋಟವನ್ನು

ವೀಕ್ಷಿಸಲು ಕೃಷಿ ತಜ್ಞರು ಹಾಗೂ ಬ್ಯಾಂಕಿನ ಉನ್ನತ ಅಧಿಕಾರಿಗಳು ಬರುತ್ತಿದ್ದರು. ಸತ್ಯಕಾಮರ ಜೊತೆ ವಿಚಾರ ವಿನಿಮಯ ಮಾಡಿ, ಅವರ ಅನುಭವ ಕೇಳುತ್ತಿದ್ದರು. ಬೀಜ ಉತ್ಪಾದನೆಯಿಂದ ಹೇರಳ ಹಣ ಸಂಪಾದನೆಯಾಗಿ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. ತೋಟದಲ್ಲಿ ಮನೆ ಕಟ್ಟಿದರು.

ಪ್ರಗತಿಶೀಲ ಮನೋಭಾವವುಳ್ಳ ಸತ್ಯಕಾಮರು ಸುಧಾರಿತ ಕೃಷಿ ಪದ್ಧತಿ ಅಳವಡಿಸಿಕೊಂಡು ವಾಣಿಜ್ಯ ಬೆಳೆಗಳಾದ ಕಬ್ಬು, ಹತ್ತಿ, ಸೂರ್ಯಕಾಂತಿ, ನೆಲಗಡಲೆ, ಎಣ್ಣೆಕಾಳುಗಳ ಬೆಳವಣಿಗೆಗೆ ಒತ್ತುಕೊಟ್ಟರು. ಕೃಷಿ ಅವರಿಗೆ ಕೆಲವೊಮ್ಮೆ ವರವಾಗಿ ಬಹಳಷ್ಟು ಸಲ ಶಾಪವಾಗಿತ್ತು. ಪ್ರಾರಂಭದಲ್ಲಿ ವಿದ್ಯುತ್‌ಶಕ್ತಿ ಇರಲಿಲ್ಲ. ನೀರಾವರಿಯ ಅನುಕೂಲ ಇರಲಿಲ್ಲ. ಮಳೆಯನ್ನೇ ನಂಬಿ ಕೃಷಿ ಮಾಡಬೇಕಾಗಿತ್ತು. ಅನಾವೃಷ್ಟಿ ಮತ್ತು ಬರಗಾಲ ಬೆಂಬಿಡದ ಸಂಗಾತಿ. ಕೊಳವೇ ಬಾವಿ ಆಳವಾಗಿ ತೋಡಿದಷ್ಟೂ ನೀರಿನ ಕೊರತೆ. ಏನಾದರೂ ತೊಂದರೆ ಆದರೆ ರಿಪೇರಿ ಮಾಡಿಸಲು ನುರಿತವರನ್ನು ಜಮಖಂಡಿ ಅಥವಾ ಬಾಗಲಕೋಟೆಯಿಂದ ಕರೆಸಬೇಕಾಗಿತ್ತು. ಮೊದಲು ಇವರ ತೋಟಕ್ಕೆ ಸರಿಯಾದ ರಸ್ತೆ ಹಾಗೂ ಸಾರಿಗೆ ಸೌಕರ್ಯವಿರಲಿಲ್ಲ. ಹಾಗಾಗಿ ಸತ್ಯಕಾಮರೇ ಸ್ಕೂಟರ್ ಅಥವಾ ಮೋಟರ್ ಸೈಕಲ್‌ನಲ್ಲಿ ಹೋಗಿ ಅವರನ್ನು ಕರೆದುಕೊಂಡು ಬಂದು ರಿಪೇರಿ ಆದ ನಂತರ ಬಿಡಬೇಕು. ಸ್ವತಃ ಟ್ರ್ಯಾಕ್ಟರ್ ನಡೆಸುತ್ತಿದ್ದರು.

ಒಮ್ಮೆ ರಾಷ್ಟ್ರೀಕೃತ ಬ್ಯಾಂಕಿನಿಂದ ಮಾಡಿದ ಸಾಲವನ್ನು ಕೆಲವು ಅನಾನುಕೂಲಗಳಿಂದ ವಾಯಿದೆ ವೇಳೆಯಲ್ಲಿ ಪಾವತಿ ಮಡಲು ಸಾಧ್ಯವಾಗಲಿಲ್ಲ. ಬ್ಯಾಂಕಿನ ಮ್ಯಾನೇಜರ್ ಈ ಪ್ರಗತಿ ಪರ ಕೃಷಿಕರ ಬಗೆಗೆ ಯಾವ ರೀತಿಯ ಸಹಾನುಭೂತಿ ತೋರಿಸದೆ, ಉದ್ಧಟತನದಿಂದ ಇವರ ಮೇಲೆ ಕೋರ್ಟಿನಲ್ಲಿ ಕೇಸು ಹಾಕಿದರು. ಅಂದಿನಿಂದ ರಾಷ್ಟ್ರೀಕೃತ ಬ್ಯಾಂಕಿನ ಸಹವಾಸವನ್ನು ಬಿಟ್ಟು, ತಮ್ಮ ಕೃಷಿಗೆ ಬೇಕಾದ ಆರ್ಥಿಕ ಸಹಾಯವನ್ನು ಸ್ನೇಹಿತರಿಂದ ಪಡೆದು ನಿಭಾಯಿಸುತ್ತಿದ್ದರು.

ಅವರು ಎಷ್ಟೇ ಪ್ರತಿಕೂಲಗಳಿದ್ದರೂ ಧೃತಿಗೆಡದೆ ಬೇಕಾದ ಪರಿಹಾರಗಳನ್ನು ಕೂಡಲೆ ಮಾಡುತ್ತಿದ್ದರು. ಅವರ ಹತ್ತಿರ ಯಾವಾಗಲೂ ಪರ್ಯಾಯ ಯೋಜನೆಗಳು, ಅನುಷಂಗಿಕ ಯೋಜನೆಗಳು ಇರುತ್ತಿದ್ದವು. ಹೀಗಾಗಿ ಒಡನಾಡಿಗಳು ವಿಚಲಿತರಾದರು. ಸತ್ಯಕಾಮರು ಶಾಂತವಾಗಿ ಇರುತ್ತಿದ್ದರು. ಕ್ರಮೇಣ ರಸ್ತೆ ಸಾರಿಗೆ, ಟೆಲಿಫೋನ್ ಸೌಕರ್ಯ ಲಭ್ಯವಾಗಿ ನಿರ್ಜನತೆ ಕಡಿಮೆಯಾಯಿತು. ಎಷ್ಟೋ ವಿದ್ಯಾವಂತ ತರುಣರು ಸುಧಾರಿತ ಕೃಷಿ ಅನುಭವ ಪಡೆಯಲು ಸತ್ಯಕಾಮರ ಜೊತೆ ಸೇರಿಕೊಂಡು ಕೆಲಸ ಮಾಡಿದರು. ಮುಧೋಳ ಹತ್ತಿರದ ಬೆಳಗಲಿಯಲ್ಲಿಯೂ ಹೊಸ ಜಮೀನನ್ನು ಪಡೆದು ವ್ಯವಸಾಯ ಪ್ರಾರಂಭಿಸಿದರು.

ಕೃಷಿ ೨೪ ಗಂಟೆಯ ಕಾಯಕ. ಆದರೆ ಸ್ವಚ್ಛಂದ ಪ್ರವೃತ್ತಿಯ ಸತ್ಯಕಾಮರು ತೋಟಕ್ಕೆ ಸದಾ ಜೋತು ಬೀಳದೆ, ಆಗಾಗ ಪರ್ಯಟನಕ್ಕೆ ಹೊರಟು ಬಿಡುತ್ತಿದ್ದರು. ಅವರ ಗೈರುಹಾಜರಿಯಲ್ಲಿ ಹಬ್ಬು ಮತ್ತು ವಸಂತ ದಂಪತಿ ತೋಟದ ಕೆಲಸವನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದರು. ಈಗ ಕುಮಾರಿ ವೀಣಾ ಬನ್ನಂಜೆ ಅವರು ಹಬ್ಬು ದಂಪತಿಗಳ ಜೊತೆಗೆ ಇದ್ದು, ಸತ್ಯಕಾಮರ ನಿಧನದ ಕೊರತೆಯನ್ನು ತುಂಬಿಸಿದ್ದಾರೆ.

ಕೃಷಿ ಕ್ಷೇತ್ರದಲ್ಲಿ ಮಾಡಿದ ಸಾಧನೆ, ಅನ್ವೇಷಣೆ ಸುಧಾರಿತ ಪದ್ಧತಿಯ ಬಗ್ಗೆ ಅವರು ಪ್ರಯತ್ನ ಪಟ್ಟಿದ್ದರೆ ಕೃಷಿಪಂಡಿತ ಪುರಸ್ಕಾರ ಸರ್ಕಾರದಿಂದ ಸಿಗುತ್ತಿತ್ತು. ಆದರೆ ಪ್ರಚಾರವನ್ನೇ ಬಯಸದ ಅವರು ಪುರಸ್ಕಾರದ ಬಗ್ಗೆ ಯೋಜನೆ ಮಾಡಲಿಲ್ಲ.

* * *

ಪುಸ್ತಕ ಪರಿಚಯ

ಪುಸ್ತಕದ ಶೀರ್ಷಿಕೆ : **ಪ್ರಳಯ**
ಲೇಖಕರು : ಎಂ.ಆರ್.ನರೇಂದ್ರ
ಪ್ರಕಾಶಕರು : ಎಚ್.ವೆಂಕಟರಾಮಯ್ಯ ಅಂಡ್ ಸನ್ಸ್, ಮೈಸೂರು
ಮೊದಲ ಮುದ್ರಣ : ೧೯೯೦
ಒಂಭತ್ತನೇ ಮುದ್ರಣ : ೧೯೯೭
ಪುಟಗಳು : ೩೫+೪೦೭+೧೬
ಬೆಲೆ : ೧೮೦ ರೂ/-

ಪ್ರಳಯವಾಗಿ ಈ ಭೂಲೋಕ ಮುಳುಗುತ್ತದೆ ಎಂಬ ವಿಚಾರ ಭಾರತೀಯರಿಗೆ ಸುಪರಿಚಿತವಾದುದಾಗಿದೆ. ಆದರೆ ಪ್ರಳಯದ ವಿಷಯವಾಗಿ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಸಾಹಿತ್ಯಗಳಲ್ಲಿ ಇರುವ ಅನೇಕ ವಿಷಯಗಳು ಜನಸಾಮಾನ್ಯರಿಗೆ, ಅಷ್ಟೇ ಏಕೆ ವಿದ್ಯಾವಂತರೆನಿಸಿಕೊಳ್ಳುವವರಿಗೂ ಗೊತ್ತಿಲ್ಲ. ಆದರೆ ಲೇಖಕರು ತಮ್ಮ ಈ ಪುಸ್ತಕದಲ್ಲಿ ಕಾಲ್ಪನಿಕ ಪ್ರಳಯಗಳು, ಸಂಭವಿಸಿದ್ದ ಪ್ರಳಯಗಳು, ಮುಂದೆ ಸಂಭವಿಸುವ ಪ್ರಳಯದ ಸಂಕೇತಗಳು ಇತ್ಯಾದಿ ಸಂಗತಿಗಳನ್ನು ಬಹಳಷ್ಟು ಆಧಾರ ಸಂಗ್ರಹಿಸಿ ತಮ್ಮ ವಿಚಾರವನ್ನು ಮಂಡಿಸಿದ್ದಾರೆ. ಮಾನವಕುಲ ಮತ್ತು ಭೂಮಿಯ ಬಗ್ಗೆ ಪ್ರೇಮ ಇರುವವರೆಲ್ಲರೂ ಓದಬೇಕಾದ ಪುಸ್ತಕ.

* * * ------- * * *

ಪುಸ್ತಕದ ಶೀರ್ಷಿಕೆ : **ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು**
ಲೇಖಕರು : ಮೂಲ – ಪ್ರೊ.ಅನಿಲ್ ಸಹಸ್ರಬುದ್ಧೆ
ಕನ್ನಡಕ್ಕೆ – ಕೆ. ಪುಟ್ಟಸ್ವಾಮಿ
ಪ್ರಕಾಶಕರು : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಮೊದಲ ಮುದ್ರಣ : ೨೦೦೩
ದ್ವಿತೀಯ ಮುದ್ರಣ : ೨೦೦೭
ಪುಟಗಳು : ೩೬+೧೧೪
ಬೆಲೆ : ೬೦ ರೂ/-

೧೯೦೯ರಲ್ಲಿ ಗಾಂಧೀ ಹಿಂದ್–ಸ್ವರಾಜ್ ಪುಸ್ತಕ ಬರೆದಾಗಿನಿಂದ ಅವರ ವಿಚಾರಗಳು ಆಧುನಿಕ ತಂತ್ರಜ್ಞಾನ, ಆಧುನಿಕ ಸಂಸ್ಕೃತಿಯ ಮೂಲ ಸಿಂಧುತ್ವವನ್ನು ಪ್ರಶ್ನಿಸುತ್ತಲೇ ಬಂದಿವೆ. ಹೊಸ ಪೀಳಿಗೆಯ ಅನೇಕ ವಿಚಾರವಂತರಿಗೆ ಗಾಂಧೀ ವಿಚಾರಗಳು ಹೊಸ–ಹೊಸ ರೀತಿಯಲ್ಲಿ ಚಿಂತನೆಗೆ ತೊಡಗಿಸಿವೆ. ಅಂಥ ವಿಚಾರ ಮಂಥನದ ಕಾರಣದಿಂದಾಗಿ ಈ ಪುಸ್ತಕ ಪ್ರಕಟಗೊಂಡಿದೆ. ಹಿಂದ್–ಸ್ವರಾಜ್‌ದಲ್ಲಿಯ ವಿಚಾರಗಳನ್ನು ಪ್ರಚಲಿತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಹೊಸ ರೂಪದಲ್ಲಿ ಲೇಖಕರು ಚಿಂತನ ಜಗತ್ತಿನ ಮುಂದೆ ಇಟ್ಟಿದ್ದಾರೆ.

ಬಾವುಟಕ್ಕೆ ಪ್ರಾಚೀನ ಇತಿಹಾಸವಿದೆ

– ವಿಭಾ ಪ್ರಕಾಶ್ ಶ್ರೀವಾತ್ಸವ

ಪ್ರಾಚೀನ ಕಾಲದಿಂದಲೂ ಜಗತ್ತಿನಾದ್ಯಂತ ವಿಭಿನ್ನ ಪ್ರಕಾರದ ಬಾವುಟಗಳ ಉಪಯೋಗದ ಪರಂಪರೆ ಇದೆ. ಭಾರತದಲ್ಲಿ ತ್ರೇತಾಯುಗದಿಂದ ಇಂದಿನವರೆಗೂ ಅನೇಕ ಪ್ರಕಾರದ ಚಿನ್ಹೆಗಳುಳ್ಳ ಬಾವುಟಗಳ ಉಲ್ಲೇಖ ಸಿಗುತ್ತದೆ.

ಸ್ವಾತಂತ್ರ್ಯ ದೊರೆಯುವವರೆಗೆ ರಾಜಧಾನಿಗಳನ್ನು ಅಲಂಕರಿಸಲು ಹಾಗೂ ವಿಶಿಷ್ಠ ಸಂದರ್ಭಗಳಲ್ಲಿ ಬಾವುಟಗಳನ್ನು ಗೌರವಪೂರ್ಣವಾಗಿ ಉಪಯೋಗಿಸುತ್ತಿದ್ದುದರ ಒಂದು ದೀರ್ಘ ಉಲ್ಲೇಖನೀಯ ಇತಿಹಾಸವಿದೆ.

ವಾಲ್ಮೀಕಿ ರಾಮಾಯಣದಲ್ಲಿ ರಾಮನನ್ನು ಯುವರಾಜನನ್ನಾಗಿ ಘೋಷಿಸಿದ ಮೇಲೆ ಅಯೋಧ್ಯೆಯ ದೇವಸ್ಥಾನಗಳು, ಭವನಗಳು, ಕೂಡುರಸ್ತೆಗಳು, ಮಾರ್ಗಗಳು, ಪೇಟೆಗಳು ಮತ್ತು ಎತ್ತರವಾದ ಮರಗಳ ಮೇಲೆ ಅಸಂಖ್ಯ ಚಿನ್ಹೆಯ ಬಾವುಟಗಳನ್ನು ಕಟ್ಟಿ ಸಂತೋಷವನ್ನು ವ್ಯಕ್ತ ಪಡಿಸಲಾಯಿತು. ರಾವಣನ ರಾಜಧಾನಿಯಲ್ಲಿ ಸೀತೆಯ ಶೋಧನೆಗಾಗಿ ಹನುಮಂತನು ಲಂಕೆಗೆ ಹೋದಾಗ ಮಾಳಿಗೆಗಳ ಮೇಲೆ ಅನೇಕ ಪ್ರಕಾರದ ಬಾವುಟಗಳು ಹಾರಾಡುತ್ತಿದ್ದುದ್ದನ್ನು ನೋಡಿದ್ದ. ವೇದವ್ಯಾಸರ ಮಹಾಭಾರತದಲ್ಲಿ ಹಸ್ತಿನಾಪುರ, ಇಂದ್ರಪ್ರಸ್ಥ ಮತ್ತು ದ್ವಾರಕಾನಗರದ ಮಹಡಿಗಳ ಮೇಲೆ ಬೇರೆ ಬೇರೆ ಬಣ್ಣದ ಬೇರೆ ಬೇರೆ ಆಕಾರಗಳ ಅಸಂಖ್ಯ ಬಾವುಟಗಳನ್ನು ಪ್ರತಿದಿನ ಹಾರಿಸಲಾಗುತ್ತಿತ್ತೆಂಬ ಉಲ್ಲೇಖವಿದೆ. ಕೌರವ ಪಾಂಡವರಲ್ಲಿ ಮಾತುಕತೆ ಮಾಡಲು ಶ್ರೀ ಕೃಷ್ಣನು ಶಾಂತಿದೂತನಾಗಿ ಹಸ್ತಿನಾಪುರಕ್ಕೆ ಹೋಗಿದ್ದಾಗ ಧೃತರಾಷ್ಟ್ರನು ಕೃಷ್ಣನ ಸ್ವಾಗತಕ್ಕಾಗಿ ಇಡೀ ಹಸ್ತಿನಾಪುರವನ್ನು ವಿಶೇಷವಾಗಿ ಬಾವುಟಗಳಿಂದ ಅಲಂಕರಿಸಲು ಆದೇಶವನ್ನು ಕೊಟ್ಟಿದ್ದ, ಬಾವುಟಗಳು ಎಂಟು ಪ್ರಕಾರದವುಗಳಾಗಿದ್ದವು. ಜಯ, ವಿಜಯ, ಭೀಮಾ, ಚಪಲಾ, ವೈಜಯಂತಿಕಾ, ದೀರ್ಘಾ, ವಿಶಾಲಾ ಮತ್ತು ಲೀಲಾ. ಬಾವುಟಗಳು ಆಯತಾಕಾರದ ಮತ್ತು ತ್ರಿಕೋಣಾಕಾರದ್ದು ಆಗಿರುತ್ತಿದ್ದವು. ಗುಣ ಭೇದ ವರ್ಣ ಭೇದಗಳ ಆಧಾರವಾಗಿ ಇನ್ನು ಅನೇಕ ಹೆಸರುಗಳ ಪ್ರಾಚೀನ ಗ್ರಂಥಗಳಲ್ಲಿ ಬರೆದಿರುವುದು ಕಂಡುಬರುತ್ತದೆ. ಉದಾಹರಣೆ ಜಯಂತಿ, ಅಷ್ಟಮಂಗಲಾ ಮತ್ತು ಜಯಹಸ್ತ ಇತ್ಯಾದಿ.

ದೇವ-ದೇವತೆಗಳ ಬಾವುಟಗಳಲ್ಲಿ ಅವರವರ ವಾಹನಗಳ ಚಿನ್ಹೆಯೇ ಹೆಚ್ಚಾಗಿ ಕಾಣಬರುತ್ತದೆ. ಉದಾಹರಣೆಗೆ ವಿಷ್ಣುವಿನ ಧ್ವಜದಲ್ಲಿ ಗರುಡನ ಮತ್ತು ಶಿವನ ಧ್ವಜದಲ್ಲಿ ವೃಷಭನ ಚಿನ್ಹೆ. ದೇವತೆಗಳಂತೆಯೇ ರಾಜರು ಮತ್ತು ಸೇನಾಪತಿಗಳ ಬಾವುಟಗಳಲ್ಲಿ ಕೂಡ ಭಿನ್ನ ಭಿನ್ನ ಚಿನ್ಹೆಗಳು ಇರುತ್ತಿದ್ದವು. ಗೊತ್ತಿರುವ ಮಾಹಿತಿಯ ಪ್ರಕಾರ ರಾಮನ ಕಾಲ ಬರುತ್ತಿದ್ದಂತೆ ಬಾವುಟಕ್ಕೆ ಬಹಳಷ್ಟು ಸೈನಿಕ ಮಹತ್ವ ಪ್ರಾಪ್ತವಾಗಿತ್ತು. ಮಹಾಭಾರತ ಕಾಲದಲ್ಲಿ ಬಾವುಟಗಳ ಈ ಪರಂಪರೆ ಇನ್ನಷ್ಟು ಹೆಚ್ಚು ವಿಕಸಿತವಾಗಿತ್ತು. ಯಾವಾಗ

ಕುರುಕ್ಷೇತ್ರದಲ್ಲಿ ಕೌರವರ ಮತ್ತು ಪಾಂಡವರ ವಿಶಾಲ ಸೇನೆ ಯುದ್ಧಕ್ಕಾಗಿ ಇದಿರುಬದಿರು ನಿಂತವೋ ಆಗ ಎರಡೂ ಸೈನ್ಯಗಳಲ್ಲಿ ಅಸಂಖ್ಯ ಬಾವುಟಗಳು ಹಾರಾಡುತ್ತಿದ್ದವು. ಬಾವುಟಗಳನ್ನು ಕೇವಲ ರಥದ ಮೇಲೆ ಅಷ್ಟೆ ಅಲ್ಲ, ಆನೆಗಳ ಮೇಲೂ ಹಾರಿಸಲಾಗುತ್ತಿತ್ತು. ಪ್ರಮುಖ ಸೇನಾ ನಾಯಕರ ಬಾವುಟಗಳ ಮೇಲೆ ಅವರ ಸ್ವಂತ ಮತ್ತು ವಿಶಿಷ್ಟ ಚಿನ್ಹೆಗಳು ಇರುತ್ತಿದ್ದವು. ಇದರಿಂದ ಅವರ ಗುರುತು ದೂರದಿಂದಲೆ ದೊರೆಯುತ್ತಿತ್ತು. ಕೌರವರ ಸೇನೆಯ ಪ್ರಥಮ ಸೇನಾಪತಿ ಭೀಷ್ಮ ಪಿತಾಮಹನ ಬೆಳ್ಳಿಯ ರಥದ ಮೇಲೆ ಐದು ನಕ್ಷತ್ರಗಳುಳ್ಳ ಬಾವುಟ ಹಾರುತ್ತಿತ್ತು. ಯುಧಿಷ್ಟಿರನ ಬಾವುಟ ಚಂದ್ರ ಮತ್ತು ಗ್ರಹಗಳ ಸಮೂಹಗಳಿಂದ ಸುಶೋಭಿತವಾಗಿರುತ್ತಿತ್ತು ಮತ್ತು ಈ ಧ್ವಜಗಳಲ್ಲದೆ ಈ ಬಾವುಟದಲ್ಲಿ ನಂದಾ–ಉಪನಂದಾ ಹೆಸರಿನ ಎರಡು ವಿಶಾಲ ಆಕಾರದ ದಿವ್ಯ ಮೃದಂಗಗಳು ಇರುತ್ತಿದ್ದವು. ಇವು ಯಂತ್ರಗಳ ಮೂಲಕ ಬಾರಿಸಲ್ಪಡುತ್ತಿದ್ದವು. ಭೀಮನ ಬಾವುಟದಲ್ಲಿ ಮಹಾಸಿಂಹ, ನಕುಲನ ಬಾವುಟದ ಮೇಲೆ ಷರಭ ಮತ್ತು ಸಹದೇವನ ಬಾವುಟದ ಮೇಲೆ ಗಂಟೆ ಮತ್ತು ಬೆಳ್ಳಿಯ ಹಂಸದ ಚಿನ್ಹೆ ಇತ್ತು. ದ್ರೌಪದಿಯ ಐದು ಮಕ್ಕಳ ಬಾವುಟಗಳಲ್ಲಿ ಕ್ರಮಶಃ ಧರ್ಮ, ವಾಯು, ಇಂದ್ರ ಮತ್ತು ಅಶ್ವಿನಿಕುಮಾರರ ಚಿತ್ರಗಳು ಅಂಕಿತವಾಗಿದ್ದವು. ಅಭಿಮನ್ಯುವಿನ ರಥದ ಬಾವುಟದಲ್ಲಿ ಕೆಲವು ಕಡೆ ಕರ್ಣಿಕಾರ ಮತ್ತು ಇನ್ನೂ ಕೆಲವೆಡೆ ಶಾಡರ್ಗ ಪಕ್ಷಿಗಳ ಚಿನ್ಹೆಯ ಉಲ್ಲೇಖ ಸಿಗುತ್ತದೆ. ಸಾತ್ಯಕಿ ಮತ್ತು ಮೃಗದಬಲರ ಬಾವುಟಗಳಲ್ಲಿ ಸಿಂಹದ ಚಿನ್ಹೆ ಹಾಗೂ ಕರ್ಣನ ಧ್ವಜದಲ್ಲಿ ಆನೆಯನ್ನು ಕಟ್ಟುವ ಸ್ವರ್ಣಮಯ ಹಗ್ಗ ಮತ್ತು ಕಮಲದ ಚಿನ್ಹೆ ಅಂಕಿತವಾಗಿತ್ತು. ಈ ಎಲ್ಲ ಬಾವುಟಗಳಿಂದ ಪ್ರಾಚೀನ ಕಾಲದ ಸಮೃದ್ಧ ಪರಂಪರೆಯ ಚಿತ್ರಣ ದೊರೆಯುತ್ತದೆ. ಇದು ಉತ್ತರೋತ್ತರ ಬೆಳೆಯುತ್ತಲೇ ಹೋಯಿತು. ಸಿಹಾ ಬುದ್ದೀನ್ ಜಲ್ ಉಮರಿ ಹೀಗೆ ಬರೆದಿದ್ದಾನೆ, "ಸುಲ್ತಾನ್ ಮಹಮದ್ ಬಿನ್ ತೊಘಲಕನ ಸ್ವಂತ ಬಾವುಟಗಳು ಕಪ್ಪು ಬಣ್ಣದ್ದಾಗಿರುತ್ತಿದ್ದವು. ಅವುಗಳ ಮಧ್ಯದಲ್ಲಿ ಬಿಳಿ ಕಸೂತಿಯ ಒಂದು ಮೊಸಳೆ ಇರುತ್ತಿತ್ತು. ಸುಲ್ತಾನನ ಹೊರತಾಗಿ ಬೇರೆ ಯಾರೂ ಇಂಥ ಬಾವುಟಗಳನ್ನು ಹೊಂದಿರಲು ಅನುಮತಿ ಇರಲಿಲ್ಲ. ಬೇರೆ ಶ್ರೀಮಂತರು ತಮ್ಮ ಶ್ರೇಣಿಗೆ ಅನುಸಾರವಾಗಿ ಬೇರೆ ಪ್ರಕಾರದ ಬಾವುಟಗಳನ್ನು ತೆಗೆದುಕೊಂಡು ಹೋಗಬಹುದಾಗಿತ್ತು." ಅಯಿನ್ ಅಕ್ಬರಿಯಲ್ಲಿ ಸಾಮ್ರಾಟ ಅಶೋಕನ ನಾಲ್ಕು ಪ್ರಕಾರದ ಬಾವುಟಗಳ ಉಲ್ಲೇಖವಿದೆ. ಅಲಂ, ವರ್ತಲೋಕ, ತುಮನಲೋಕ ಮತ್ತು ಝುಂಡಾ. ಸ್ವಾತಂತ್ರ್ಯದ ಪೂರ್ವದಲ್ಲಿ ರಾಜರು ಮತ್ತು ನವಾಬರು ತಮ್ಮ ತಮ್ಮ ಧ್ವಜಗಳನ್ನು ಹೊಂದಿದ್ದರು. ಸ್ವಾತಂತ್ರ್ಯದ ನಂತರ ರಾಜ್ಯಗಳ ವಿಲೀನವಾಗಿ ಭಾರತ ಗಣರಾಜ್ಯವಾಯಿತು ಮತ್ತು ರಾಷ್ಟ್ರಧ್ವಜದ ರೂಪದಲ್ಲಿ ಮೂರು ಬಣ್ಣದ ಬಾವುಟವನ್ನು ಅಂಗೀಕರಿಸಲಾಯಿತು. ರಾಷ್ಟ್ರಧ್ವಜದ ಸರ್ವ ಪ್ರಥಮ ಪರಿಕಲ್ಪನೆಯನ್ನು ಮೇಡಂ ಬಿಕಾಜಿ ಮಾಡಿದ್ದರೆಂದು ಹೇಳಲಾಗುತ್ತದೆ. ಭೂಗತರಾಗಿದ್ದ ಕ್ರಾಂತಿಕಾರಿಗಳ ಸಹಯೋಗದಿಂದ ಇದನ್ನು ಸನ್ ೧೯೦೭ ರಲ್ಲಿ ಜರ್ಮನಿಯ ಸ್ಟೆಟ್‌ಗಾರ್ಡ್ ನಗರದಲ್ಲಿ ಹಾರಿಸಲಾಗಿತ್ತು. ಇದನ್ನು ಭಾರತೀಯರ ಆಕಾಂಕ್ಷೆಗಳ ಪ್ರತಿನಿಧಿತ ಮೊದಲನೆಯ ಧ್ವಜಾರೋಹಣವೆಂದು

ತಿಳಿಯಲಾಗುತ್ತದೆ. ಕೆಲವು ಬೇರೆ ಇತಿಹಾಸಕಾರರ ಅನುಸಾರ ಮೊದಲನೇ ಭಾರತೀಯ ಧ್ವಜ ೭ ಅಗಸ್ಟ್ ೧೯೦೬ ರಲ್ಲಿ ಕಲ್ಕತ್ತೆಯ ಪಾರ್ಸಿತೋಟದಲ್ಲಿ ಹಾರಿಸಲಾಗಿತ್ತು. ಬಿಕಾಜಿ ಕಾಮ ರೂಪಿಸಿದ ಧ್ವಜದಲ್ಲಿ ಮೂರು ಪಟ್ಟೆಗಳಿದ್ದವು. ಮೇಲಿನ ಕೆಂಪು ಪಟ್ಟಿಯಲ್ಲಿ ಬಿಳಿ ಕಮಲದ ಜೊತೆ ಜೊತೆಯಲ್ಲಿ ಏಳು ನಕ್ಷತ್ರಗಳು ಆಕಾಶಗಂಗೆಯ ಪ್ರತೀಕವಾಗಿದ್ದವು. ಮಧ್ಯದ ಹಳದೀ ಪಟ್ಟೆಯಲ್ಲಿ ದೇವನಾಗರಿ ಲಿಪಿಯಲ್ಲಿ ವಂದೇ ಮಾತರಂ ಬರೆಯಲಾಗಿತ್ತು. ಕೆಳಗಿನ ಹಸಿರು ಪಟ್ಟೆಯಲ್ಲಿ ಎಡಭಾಗದಲ್ಲಿ ಸೂರ್ಯ ಮತ್ತು ಬಲಭಾಗದಲ್ಲಿ ಅರ್ಧಚಂದ್ರನ ಮೇಲೆ ನಕ್ಷತ್ರ ಇದ್ದವು. ಇದಾದ ಒಂಭತ್ತು ವರ್ಷಗಳ ನಂತರ ಹೋಂರೂಲ್ ಚಳುವಳಿಯಲ್ಲಿ ಡಾ.ಅನಿಬೆಸೆಂಟ್ ಮತ್ತು ಲೋಕಮಾನ್ಯ ತಿಲಕರು ಇನ್ನೊಂದು ಬಗೆಯ ಬಾವುಟದ ಸ್ವರೂಪವನ್ನು ಮಂಡಿಸಿದರು. ಅದರಲ್ಲಿ ಮೇಲ್ಭಾಗದ ಮೂಲೆಯಲ್ಲಿ ಯೂನಿಯನ್ ಜಾಕ್ ಇತ್ತು. ಆ ದಿನಗಳಲ್ಲಿ ಭಾರತೀಯರ ಜನಮಾನಸದಲ್ಲಿ ನಾವು ಬ್ರಿಟಿಷ್ ಸಾಮ್ರಾಜ್ಯದ ಅಂತರ್ಗತವಾಗಿ ಹೋಂರೂಲ್ ಅರ್ಥಾತ್ ಸ್ವಶಾಸನ ಬೇಕು ಎಂಬುದರ ಪ್ರತೀಕವಾಗಿತ್ತು. ಉಳಿದ ಭಾಗದಲ್ಲಿ ಒಂದಾದ ನಂತರ ಒಂದರಂತೆ ಕೆಂಪು ಮತ್ತು ಹಸಿರು ಪಟ್ಟಿಗಳಿದ್ದವು. ಅವುಗಳ ಮಧ್ಯದಲ್ಲಿ ಆಕಾಶಗಂಗೆ ಹರಡಿತ್ತು. ಕೆಳಗೆ ಎಡಭಾಗದ ಮೂಲೆಯಲ್ಲಿ ಅರ್ಧಚಂದ್ರನ ಮೇಲೆ ನಕ್ಷತ್ರವಿರುವ ಗುರುತು ಇತ್ತು.

೧೯೨೧ ರಲ್ಲಿ ನ್ಯಾಷನಲ್ ಕಾಲೇಜ್, ಮಚಲೀಪಟ್ಟಣದಲ್ಲಿ ಒಬ್ಬ ವಿದ್ಯಾರ್ಥಿ ಮಹಾತ್ಮಾ ಗಾಂಧೀಜಿಯವರಿಗೆ ಎರಡು ಬಣ್ಣಗಳುಳ್ಳ ಬಾವುಟವನ್ನು ಉಡುಗೊರೆಯಾಗಿ ಕೊಟ್ಟ. ಅದರಲ್ಲಿ ಭಾರತದ ಎರಡು ಪ್ರಮುಖ ಸಂಪ್ರದಾಯಗಳ ಪ್ರತಿನಿಧಿತ್ವ ಸಂಕೇತಿಸುವ ಕೆಂಪು ಮತ್ತು ಹಸಿರು ಪಟ್ಟಿಗಳಿದ್ದವು. ಮಹಾತ್ಮಾ ಗಾಂಧೀಜಿಯವರು ಇದರಲ್ಲಿ ಒಂದು ಬಿಳಿಪಟ್ಟಿಯನ್ನು ಮತ್ತು ಮಧ್ಯದಲ್ಲಿ ಚರಕಾ ಸೇರಿಸಬೇಕೆಂಬ ಸಲಹೆಕೊಟ್ಟರು.

ಸನ್ ೧೯೩೧ ರಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲ್‌ರವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ನ ಕರಾಚಿ ಅಧಿವೇಶನದಲ್ಲಿ ಸ್ವೀಕೃತಗೊಂಡ ಬಾವುಟದ ಹೊಸ ರೂಪ ಕಂಡುಬಂತು. ಈ ಬಾವುಟದಲ್ಲಿ ಸಾಹಸ ಮತ್ತು ತ್ಯಾಗದ ಪ್ರತೀಕವಾಗಿ ಕೇಸರಿ ಬಣ್ಣದ ಒಂದು ಪಟ್ಟಿ ಇತ್ತು, ಇದಲ್ಲದೆ ಬಿಳಿಯ ಪಟ್ಟಿಯಲ್ಲಿ ನೀಲಿ ಬಣ್ಣದ ಸತ್ಯದ ಪ್ರತೀಕ ಚರಕಾದ ಚಿತ್ರಿತಗೊಂಡಿತ್ತು, ಅಲ್ಲದೆ ನಿಷ್ಠೆ ಮತ್ತು ಶೌರ್ಯದ ಪ್ರತೀಕ ಹಸಿರು ಬಣ್ಣದ ಪಟ್ಟಿ ಇತ್ತು.

ಸನ್ ೧೯೪೭ ರ ೨೨ ಜುಲೈರಂದು (ಸ್ವಾತಂತ್ರ್ಯಕ್ಕೆ ಮೂರು ವಾರಗಳ ಮುನ್ನ) ಸಂವಿಧಾನ ಸಭೆಯು ಚರಕದ ಸ್ಥಾನದಲ್ಲಿ ಸಾರನಾಥದ ಸಿಂಹ ಸ್ಥಂಭದ ಮೇಲಿನ ಅಶೋಕನ ಚಕ್ರವನ್ನು ಸ್ವೀಕರಿಸಿತು. ಪಂಡಿತ್ ನೆಹರೂರವರು ರಾಷ್ಟ್ರಧ್ವಜ ಸಂಬಂಧವಾದ ಠರಾವನ್ನು ಮಂಡಿಸುತ್ತಾ "ಭಾರತದ ಪ್ರಾಚೀನ ಸಂಸ್ಕೃತಿಯ ಪ್ರತೀಕವಿದು" ಎಂದು ಹೇಳಿದರು.

ಸಾಭಾರ : ಅಣುವ್ರತ

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಟ್ರಸ್ಟಿನ ಮುಖ್ಯ ಕಾರ್ಯಕ್ರಮವಾದ ಕರುಣಾಗೃಹದ ಕಟ್ಟಡವನ್ನು ಕಟ್ಟಿ ೩೮ ವರ್ಷಗಳಾದವು. ಕಟ್ಟಡ ಸಿದ್ಧವಾದ ದಿನದಿಂದ ಬಿಡುವಿಲ್ಲದೆ ಉಪಯೋಗದಲ್ಲಿದೆ. ಈ ಕಟ್ಟಡದಲ್ಲಿ ನೂರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ವ್ಯಾಸಂಗ ಮಾಡಿ ಹೋಗಿದ್ದಾರೆ. ನೂರಾರು ಜನರು ಸಭೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಯೋಜನ ಪಡೆದಿದ್ದಾರೆ. ಅನೇಕ ಮಹನೀಯರ ಉಪನ್ಯಾಸಗಳು ನಡೆದುಹೋಗಿವೆ. ಒಂದು ಅರ್ಥದಲ್ಲಿ ಕರುಣಾಗೃಹದ ಕಟ್ಟಡ ಟ್ರಸ್ಟ್‌ನ ಸಾರ್ವಜನಿಕ ಸೇವಾ ಇತಿಹಾಸದೊಂದಿಗೆ ಹಾಸುಹೊಕ್ಕಾಗಿ ಬೆರೆತಿದೆ. ಈ ಕಟ್ಟಡದ ನಿರ್ಮಾಣದ ಆಗಿನ ಖರ್ಚು ಸುಮಾರು ಒಂದೂವರೆ ಲಕ್ಷ ರೂಪಾಯಿಗಳಾಗಿತ್ತು. ಇದರ ಮುಕ್ಕಾಲು ಭಾಗ ಹಣವನ್ನು ಜನಸಾಮಾನ್ಯರೇ ಕೊಟ್ಟಿದ್ದಾರೆ. ಓರ್ವ ಅಮೇರಿಕನ್ ಮಹಿಳೆಯ ಸಹಾಯವೂ ಕೂಡ ಸಿಕ್ಕಿತ್ತು. ಈ ಕಟ್ಟಡವನ್ನು ಕಟ್ಟಿದಾಗಿನಿಂದ ಅದಕ್ಕೆ ಯಾವುದೇ ಸುಣ್ಣ ಬಣ್ಣದ ಕೆಲಸವನ್ನಾಗಲೀ ರಿಪೇರಿ ಕೆಲಸವನ್ನಾಗಲೀ ಮಾಡಿರಲಿಲ್ಲ. ಈಗ ಆ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ. ಕಟ್ಟಡದ ಮೊದಲಹಂತದ ರಿಪೇರಿ ಕೆಲಸಕ್ಕೆ ಸುಮಾರು ಎರಡುಲಕ್ಷ ರೂಪಾಯಿಗಳಷ್ಟು ಖರ್ಚಾಗುವ ಅಂದಾಜಿದೆ. ಎರಡನೇ ಹಂತದ ಕೆಲಸಕ್ಕೂ ಸಹ ಎರಡು ಲಕ್ಷ ರೂಪಾಯಿಗಳಷ್ಟು ಖರ್ಚಾಗುವ ನಿರೀಕ್ಷೆಯಿದೆ. ಈ ಎರಡು ಹಂತದ ಕೆಲಸ ಮುಗಿದಾದ ಮೇಲೆ ಕರುಣಾಗೃಹ ಸುಸಜ್ಜಿತವಾದ ಮತ್ತು ಎಲ್ಲಾ ಮೂಲ ಸೌಕರ್ಯಗಳುಳ್ಳ ಕಟ್ಟಡವಾಗಿ ಹೆಚ್ಚಿನ ಸೇವಾ ಕಾರ್ಯಗಳಿಗೆ ತನ್ನನ್ನು ಸಮಾಜಕ್ಕೆ ಅರ್ಪಿಸಿಕೊಳ್ಳಲಿದೆ. ಈಗ ಕರುಣಾಗೃಹದಲ್ಲಿರುವ ವಿದ್ಯಾರ್ಥಿಗಳಿಗೂ ಹೆಚ್ಚಿನ ಸೌಕರ್ಯದ ಲಾಭ ದೊರೆಯಲಿದೆ.

ಟ್ರಸ್ಟ್‌ನ ಈ ರಚನಾತ್ಮಕ ಕಾರ್ಯಕ್ಕೆ ಟ್ರಸ್ಟಿನ ಅಭಿಮಾನಿಗಳು ಧನ ಸಹಾಯ ಮಾಡಬೇಕೆಂದು ಈ ಮೂಲಕ ವಿನಂತಿಸಿಕೊಳ್ಳಲಾಗುತ್ತಿದೆ.

ಟ್ರಸ್ಟ್‌ಗೆ ಆದಾಯ ತೆರಿಗೆ ಇಲಾಖೆಯ ೮೦-ಜಿ ಪ್ರಮಾಣ ಪತ್ರ ದೊರೆತಿದೆ. ಇದರ ಸದುಪಯೋಗವನ್ನು ದಾನಿಗಳು ಮಾಡಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಕರುಣಾಗೃಹದಲ್ಲಿರುವ ಮಕ್ಕಳು ತಮ್ಮ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮೆಚ್ಚುಗೆ ಪಡೆದಿದ್ದಾರೆ. ನಾಗಮಂಗಲದಲ್ಲಿ ನಡೆದ ನಾಗರಂಗ ನಾಟಕೋತ್ಸವದ ಸಂದರ್ಭದಲ್ಲಿ ಕೆಲವು ನಾಟಕಗಳನ್ನು ನೋಡಲು ಹೋಗಿದ್ದರು. ಅದೇ ರೀತಿ ಇತ್ತೀಚೆಗೆ ಶ್ರೀರಂಗಪಟ್ಟಣದಲ್ಲಿ ನಡೆದ ಭಾರತದರ್ಶನ ಕಾರ್ಯಕ್ರಮವನ್ನು ನೋಡಿ ಬಂದರು.

೨೦೦೮ ಆಗಸ್ಟ್ ಮಾಹೆಯ ದಾನಿಗಳು:-


೧. ಶ್ರೀ ರಮೇಶ್ ಕುಲಾಲ್, ಮುಂಬಯಿ; ೨. ಶ್ರೀ ಸಿ.ಎಸ್.ಬನಶಂಕರಯ್ಯ; ೩. ಶ್ರೀಮತಿ ಗೌರಿ ಅರಸ್, ಮೈಸೂರು; ೪. ಶ್ರೀ ಸತ್ಯಪ್ರಕಾಶ ವಾರಣಾಸಿ, ಬೆಂಗಳೂರು: ೫. ಶ್ರೀ ಪಿ.ಬಿ.ಮಹಿಷಿ, ಬೆಂಗಳೂರು; ೬. ಶ್ರೀ ಪ್ರಸಾದ್, ಬೆಂಗಳೂರು ಮತ್ತು ಸಂಸ್ಥೆಯ ಎಲ್ಲಾ ಮಾಹೆಯಾನ ದಾನಿಗಳು.

* * *

ಜನಪದ ನಿಲಯದ ಅಂತರಂಗದಲ್ಲಿ....೫೮

- ಸುರೇಂದ್ರ ಕೌಲಗಿ

ಕಾಲ ಉರುಳಿತು



ಜನಪದ ಸೇವಾ ಟ್ರಸ್ಟ್ ಸ್ಥಾಪನೆಗೆ ಕಾರಣವಾದಾಗ ವಯಸ್ಸು ಇಪ್ಪತ್ತಾರು. ಮಗ ಸಂತೋಷ್ ಟ್ರಸ್ಟಿನ ಪೂರ್ಣಾವಧಿ ಕಾರ್ಯಕರ್ತನಾಗಿ, ಟ್ರಸ್ಟ್‌ನ ಸದಸ್ಯನಾಗಿ ಬಂದದ್ದು ತನ್ನ ಮೂವತ್ತೊಂದನೇ ವಯಸ್ಸಿನಲ್ಲಿ. ಕಿರಿಯ ಮಗ ಸುಘೋಷ ಟ್ರಸ್ಟಿಗಾಗಿ ತನ್ನ ಸಮಯವನ್ನು ಮತ್ತು ಶ್ರಮ ವಿನಿಯೋಗಿಸಲು ಪ್ರಾರಂಭಿಸಿದ್ದು ಇಪ್ಪತ್ತನಾಲ್ಕನೇ ವಯಸ್ಸಿನಲ್ಲಿ. ಈ ಇಬ್ಬರು ತಮ್ಮ ಯುವಾವಸ್ಥೆಯಲ್ಲಿ ಟ್ರಸ್ಟಿನ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಾದ ಮೇಲೆ ಟ್ರಸ್ಟಿನ ಕೆಲಸ ಕಾರ್ಯಗಳಲ್ಲಿ ತೀವ್ರತೆ ಬಂತು. ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಸಾಧ್ಯವಾಯಿತು.

ಈಗ ಈ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಕಾರಣ "ಜನಪದ ನಿಲಯದ ಅಂತರಂಗದಲ್ಲಿ" ಇದುವರೆಗಿನ ಘಟನಾವಳಿಗಳು ಮುಖ್ಯವಾಗಿ ಟ್ರಸ್ಟ್ ಪ್ರಾರಂಭವಾದ ಮೊದಲಿನ ಅವಧಿಗೆ ಸಂಬಂಧಿಸಿದ್ದಾಗಿದ್ದವು. ಮುಖ್ಯವಾದ ವಿಷಯಗಳು ಸಾಮಾನ್ಯತಃ ದಾಖಲುಗೊಂಡಿವೆ. ಆದರೆ ಅನೇಕ ಸಣ್ಣ ಪುಟ್ಟ ಘಟನೆಗಳು-ಬೆಳವಣಿಗೆಗಳು-ಸಹಾಯಗಳು ಬಿಟ್ಟುಹೋಗಿವೆ. ಅವೆಲ್ಲವುಗಳನ್ನು ರಂಜಿಸಿ ಬರೆಯಬಹುದಾಗಿತ್ತು. ಆದರೆ ಆ ರೀತಿ ಬರೆಯುವ ಉದ್ದೇಶ ಈ ಲೇಖನದ ಮಾಲೆಯದ್ದಾಗಿರಲಿಲ್ಲ. ಟ್ರಸ್ಟ್ ಹೇಗೆ ಸ್ಥಾಪಿತಗೊಂಡಿತು ಮತ್ತು ನಾಲ್ಕೂವರೆ ದಶಮಾನಗಳ ಕಾಲ ಹೇಗೆ ತನ್ನದೇ ಆದ ರೀತಿಯಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತಾ ಬಂದಿತ್ತು ಎಂಬುದನ್ನು ಪ್ರಾಮಾಣಿಕವಾಗಿ ಮತ್ತು ಯಾವುದೇ ಉತ್ಪ್ರೇಕ್ಷೆಯಿಲ್ಲದೆ ಟ್ರಸ್ಟಿನ ಹಿತೈಷಿಗಳಿಗೆ, ಅಭಿಮಾನಿಗಳಿಗೆ, ದಾನಿಗಳಿಗೆ ತಿಳಿಸಬೇಕೆಂಬುದು ಪ್ರಥಮ ಆದ್ಯತೆಯಾಗಿತ್ತು. ಈ ಲೇಖನಗಳ ಸರಣಿಗೆ ಸಾಹಿತ್ಯಕ ಮೌಲ್ಯ ಇಲ್ಲ. ಸಮಾಜ ಸೇವಾ ಕ್ಷೇತ್ರದಲ್ಲಿ ಓರ್ವ ಸಮಾಜ ಸೇವಕನ ದುಡಿಮೆಯ ಅನುಭವಗಳ ದಾಖಲೆಗಿರಬಹುದಾದಂಥ ಮೌಲ್ಯ ಇದಕ್ಕೆ ಇರಬಹುದು. ಈ ಲೇಖನಗಳ ಸರಣಿಯಲ್ಲಿ ಯಾವುದಾದರೊಂದು ಸಹಾಯ, ಯಾವುದಾದರೊಬ್ಬ ವ್ಯಕ್ತಿ ದಾಖಲೆಗೊಳ್ಳದೇ ಹೋಗಿದ್ದ ಮಾತ್ರಕ್ಕೆ ಆ ಸಹಾಯದ ಮತ್ತು ಆ ವ್ಯಕ್ತಿಯ ಮಹತ್ವ ಯಾವ ಕಾರಣಕ್ಕೂ ಕಡಿಮೆಯಿಲ್ಲ. ಟ್ರಸ್ಟ್ ಸ್ಥಾಪಿತಗೊಂಡಾಗ, ಹಲವಾರು ವರ್ಷಗಳ ನಂತರ ಇಂಥದ್ದೊಂದು ಲೇಖನ ಮಾಲೆಯನ್ನು ಬರೆಯಲಾಗುತ್ತದೆಂಬ ಕಲ್ಪನೆ ಲವಲೇಶವೂ ಇರಲಿಲ್ಲವಾದ್ದರಿಂದ ಟ್ರಸ್ಟಿನ ಬೆಳವಣಿಗೆ ಹಾಗೂ ಕಾರ್ಯಕ್ರಮಕ್ಕೆ ಸಂಬಂಧಿಸಿಂತೆ ವ್ಯವಸ್ಥಿತವಾದ ಟಿಪ್ಪಣಿಗಳನ್ನ

ಎಲ್ಲಿಯೂ ಬರೆದಿರಲಿಲ್ಲ. ಆದ್ದರಿಂದ ಈ ಲೇಖನ ಮಾಲೆಯಲ್ಲಿ ದಾಖಲಿತಗೊಂಡಿರುವ ಸಂಗತಿಗಳು ಸ್ಮರಣಶಕ್ತಿಯ ಬಲದಿಂದ ಮಾತ್ರ. ಇದನ್ನು ಬರೆಯುವಾಗ ಆ ಸ್ಮರಣಶಕ್ತಿ ಎಷ್ಟರ ಮಟ್ಟಿಗೆ ನೆರವಿಗೆ ಬಂದಿದೆಯೋ ಅಷ್ಟರ ಮಟ್ಟಿಗೆ ಮಾತ್ರ ಇದು ಪೂರ್ಣ. ಉಳಿದಂತೆ ಬಹಳಷ್ಟು ಅಪೂರ್ಣ. ಕೊನೆಯ ಆದರೆ ದಾಖಲಿಸಬೇಕಾದ ಅತೀ ಮಹತ್ವದ ಸಂಗತಿ ಏನೆಂದರೆ ಯಾವುದೇ ಸಾರ್ವಜನಿಕ ಸಂಸ್ಥೆಯ ಬೆಳವಣಿಗೆಯಲ್ಲಿ, ನಿರ್ವಹಣೆಯಲ್ಲಿ ಆಡಳಿತಮಂಡಳಿ ಮತ್ತು ಆ ಆಡಳಿತಮಂಡಳಿಯಲ್ಲಿರುವ ಸದಸ್ಯರು ಮುಖ್ಯವಾದ ಪಾತ್ರವಹಿಸುತ್ತಾರೆ. ಅವರ ವಿಶ್ವಾಸ, ಸ್ನೇಹ, ಸಹಕಾರವಿಲ್ಲದೆ ಸಂಸ್ಥೆ ಮುನ್ನಡೆಯಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಜನಪದ ಸೇವಾ ಟ್ರಸ್ಟ್ ಅತ್ಯಂತ ಭಾಗ್ಯಶಾಲಿ ಸಂಸ್ಥೆ ಎಂದೇ ಹೇಳಬೇಕು. ನಾಲ್ಕೂವರೆ ದಶಕಗಳ ಕಾಲ ಟ್ರಸ್ಟ್ ಯಾವುದೇ ಅನಾಹುತಕ್ಕೆ ಒಳಗಾಗದೆ ಏಕಪ್ರಕಾರವಾಗಿ ಕ್ರಿಯಾಶೀಲವಾಗಿ ಉಳಿದಿರುವುದಕ್ಕೆ ಮತ್ತು ಏಳ್ಗೆಯ ಭವಿಷ್ಯದತ್ತ ಮುಖಮಾಡಿ ನಿಂತಿರುವುದಕ್ಕೆ ಟ್ರಸ್ಟ್‌ನ ಆಡಳಿತ ಮಂಡಳಿಯ ಎಲ್ಲ ಸದಸ್ಯರೂ ಕಾರಣಕರ್ತರಾಗಿದ್ದಾರೆ. ಈ ವಿಷಯದಲ್ಲಿ ಯಾರೂ ದೊಡ್ಡವರಿಲ್ಲ, ಯಾರೂ ಚಿಕ್ಕವರಿಲ್ಲ. ಎಲ್ಲರೂ ಸಮಾನರು.

ಟ್ರಸ್ಟಿನ ದೈನಂದಿನ ಕಾರ್ಯ ನಿರ್ವಹಣೆಯು ಕೂಡಾ ಅತಿ ಮುಖ್ಯವಾಗುತ್ತದೆ. ಅದಕ್ಕಾಗಿ ನಿಷ್ಠಾಯುಕ್ತ ಕಾರ್ಯಕರ್ತರು ಬೇಕಾಗುತ್ತದೆ. ಅವರ ಮೇಲೆಯೇ ನಿಜವಾದ ಭಾರಬಿದ್ದಿರುತ್ತದೆ. ಟ್ರಸ್ಟ್ ಪ್ರಾರಂಭವಾದಾಗಿನಿಂದ ಆಯಾ ಸಮಯಕ್ಕೆ ಕಾರ್ಯಕರ್ತರು ಸೇವೆ ಸಲ್ಲಿಸಿ ಹೋಗಿದ್ದಾರೆ. ಈಗ ಕಳೆದ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಕಾರ್ಯಕರ್ತರೆಲ್ಲ ಯುವಕರಾಗಿದ್ದಾರೆ. ಅವರೆಲ್ಲರೂ ತಮ್ಮನ್ನು ಒಂದು ತಂಡವಾಗಿ ಪರಿಗಣಿಸಿ ಟ್ರಸ್ಟ್‌ನ ಕೆಲಸಗಳನ್ನು ಅಹರ್ನಿಶಿ ಮಾಡುತ್ತಿದ್ದಾರೆ. ಅಂಥ ಕಾರ್ಯಕರ್ತರನ್ನು ಸ್ಮರಿಸುವುದು ಸಮಯೋಚಿತವಾಗಿದೆ. ಅನ್ನದಾನಿ (ಅಂಥೋಣಿ), ಶೀಲವಂತ್, ಶ್ರೀಕೃಷ್ಣ, ಜಯಣ್ಣ, ರಾಮಶೆಟ್ಟಿ, ಪ್ರಕಾಶ್, ರತ್ನಮ್ಮ, ಲಕ್ಷ್ಮಿ, ಕಾಳಯ್ಯ, ದೇವರಾಜು, ವಿಜಯ ಮುಂತಾದವರು. ಇವರಿಗೆಲ್ಲ ಕೊಡಲಾಗುತ್ತಿರುವ ಸಂಭಾವನೆ ಇಂದಿನ ಕಾಲ ಪರಿಸ್ಥಿತಿಯಲ್ಲಿ ತುಂಬಾ ಕಡಿಮೆ. ಜೀವನ ಭದ್ರತೆಯೂ ಇಲ್ಲ. ಆದರೂ ಕೂಡ ಟ್ರಸ್ಟಿನ ಮೇಲಿನ ಅಭಿಮಾನದಿಂದ ಹಾಗೂ ಟ್ರಸ್ಟಿನ ಕಾರ್ಯಗಳಲ್ಲಿ ಅವರಿಗೆ ಪ್ರೀತಿ ಇರುವುದರಿಂದ ಅವರು ಶ್ರದ್ಧೆಯಿಂದ ಕೆಲಸಮಾಡಿಕೊಂಡು ಹೋಗುತ್ತಿದ್ದಾರೆ.

ಈಗ ನಲವತ್ತೈದು ವರ್ಷಗಳ ಕಾಲ ಕಳೆದಿದೆ. ಹೊಸ ಯುವಕರು ಬಂದಿದ್ದಾರೆ; ಅದು ಅನಿವಾರ್ಯ ಕೂಡ. ಆದ್ದರಿಂದ "ಜನಪದ ನಿಲಯದ ಅಂತರಂಗದಲ್ಲಿ"ಯ ಮುಂದಿನ ಲೇಖನ ಮಾಲೆಗಳಲ್ಲಿ ಹೊಸ ಯುವಕರ ಕೊಡುಗೆ, ಅವರ ಪ್ರಯತ್ನ ಇತ್ಯಾದಿಗಳು ದಾಖಲಿತಗೊಂಡರೆ ಅದು ಟ್ರಸ್ಟಿನ ಇತಿಹಾಸದ ಅನಿವಾರ್ಯ ಸಂಗತಿಗಳಾಗುತ್ತವೇ ಹೊರತು ಮೋಹದ ವ್ಯಾಪಾರವಲ್ಲ.

(ಮುಂದುವರೆಯುವುದು.....)

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

ಶ್ರೀ ಚಾಂದ್ ಬಾಷಾ ಬಿನ್ ಷೇಕ್, ಕೋಲಾರ

ಶ್ರೀ ವಿ. ಕೃಷ್ಣಪ್ಪ, ಕೋಲಾರ

ಶ್ರೀ ಕೆ.ಎಸ್. ಕೃಷ್ಣಪ್ಪ, ಕೋಲಾರ

ಶ್ರೀ ಮರಿರೆಡ್ಡಿ, ಕೋಲಾರ

ಶ್ರೀ ಎನ್.ಎಸ್. ಸುಬ್ಬರಾವ್, ಶೃಂಗೇರಿ

ಶ್ರೀ ಬಿ.ಎಸ್. ಶ್ರೀನಾಥ್, ಕೋಲಾರ

ಶ್ರೀ ದರ್ಶನಮೂರ್ತಿ, ಕೋಲಾರ

ಶ್ರೀ ಕೆ.ವಿ. ಶಂಕರಪ್ಪ, ಕೋಲಾರ

ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಪತ್ರಿಕೆಗೆ ಹೊಸದಾಗಿ ಚಂದಾದಾರರಾದ ಮಾನ್ಯ

ಡಾ. ಜೀವನ್‌ಕುಮಾರ್
ಬೆಂಗಳೂರು

ಶ್ರೀ ಸಿ.ಎನ್. ರಮೇಶ್‌ರಾಜು
ಚನ್ನಪ್ಪನದೊಡ್ಡಿ

ಶ್ರೀ ಜಿ.ಬಿ. ಶಿವರಾಜು
ಬೆಂಗಳೂರು

ಶ್ರೀ ಬಿ.ಟಿ. ವಿಶ್ವನಾಥ್
ಮಂಡ್ಯ

ಇವರಿಗೆ ಕೃತಜ್ಞತೆಗಳು.

* * *

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA **-** Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.Phone : 08236 – 299854, 316344
e-mail : janapada@yahoo.com Printed at Sanketh Mudrana, Melkote.